# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

## ಮರಳಿ ಬಾ ಮಗುವೇ..

# ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವ ಮಾರ್ಗೋಪಾಯಗಳು



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಕೋಲಾರ

# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್‌ಶಿಪ್ ಅಕಾಡಮಿ (SLA_SISLEP)**

**ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL_NIEPA), ನವದೆಹಲಿ**

**ಇವರ ಸಹಯೋಗದಲ್ಲಿ**

## ತರಬೇತಿ ಸಾಹಿತ್ಯ ಕೈಪಿಡಿ

# “ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಬಿಟ್ಟ ಮಕ್ಕಳನ್ನು ಮುಖ್ಯ ವಾಹಿನಿಗೆ ಕರೆತರುವ ಮಾರ್ಗೋಪಾಯಗಳು ”

**ಸಹಕಾರ:**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಜಿ: ಕೋಲಾರ**

## 2023–24

## ಪರಿಕಲ್ಪನೆ

**ಡಾ.ಬಿ.ಕೆ.ಎಸ್.ವರ್ಧನ್**

**ಮಾನ್ಯ ನಿರ್ದೇಶಕರು**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ**

**ಮಾರ್ಗದರ್ಶನ:**

**ಶ್ರೀ ಕೆ.ಎನ್. ಜಯಣ್ಣ**

ಪ್ರಾಂಶುಪಾಲರು ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ)

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ

## -: ಸಾಹಿತ್ಯ ರಚನಾ ತಂಡ :-

**ಶ್ರೀಟಿ.ಕೆ. ರಾಘವೇಂದ್ರ,** ಹಿರಿಯಉಪನ್ಯಾಸಕರು, ಡಯಟ್, ಕೋಲಾರ

- ಶ್ರೀ**ಜಿ.ಎಂಗಂಗಪ್ಪ**, ಉಪನ್ಯಾಸಕರು, ಡಯಟ್, ಕೋಲಾರ.
- **ಶ್ರೀಜಿಶ್ರೀನಿವಾಸ**, BRP BRC,ಮುಳಬಾಗಿಲು.
- ಶ್ರೀ**ಬಿ.ಎಸ್ಮಲ್ಲಿಕಾರ್ಜುನಯ್ಯ**,BBRP, BRC, ಕೋಲಾರ.
- ಶ್ರೀಮತಿ**ಮಂಜುಳಕೆ.**BRP BRC,ಮುಳಬಾಗಿಲು.
- ಶ್ರೀಮತಿ**ಗೀತಾಅಂತೋನಿಮೇರಿಜಿ**. H.M, ಸ.ಕಿ.ಪ್ರಾ.ಶಾಲೆ ಚೊಕ್ಕರಬಂಡೆ, ಕೆ.ಜಿ.ಎಫ್.

**ಎಸ್.ಎಲ್.ಎ – ಸಿಸ್ಲೆಪ್ ತಂಡ**

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು

# ನಿರ್ದೇಶಕರ ಆಶಯ ನುಡಿ



ಡಾ. ಬಿ.ಕೆ.ಎಸ್. ವರ್ಧನ್
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು
ನಿರ್ವಹಣಾ ಸಂಸ್ಥೆ (ಸಿಸ್ಲೆಪ್),
ಕರ್ನಾಟಕ, ಧಾರವಾಡ

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ

ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

ದಿನಾಂಕ: 25, ಮಾರ್ಚ, 2025 (ಡಾ. ಬಿ.ಕೆ.ಎಸ್. ವರ್ಧನ್)

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP) ಯ ಪರಿಚಯ:**

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (State Institute of School Leadership, Educational Planning and Management (SISLEP) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ'ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



**ಸಂಸ್ಥೆಯ ದೂರದರ್ಶಿತ್ವ:**

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ: 08362441129 ಇ–ಮೇಲ್: sislepdirector.dwd@gmail.com**

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management, Administration and Training) ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:**

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.
- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು:** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ

ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ

ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು. ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.

- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ

ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ,

ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ

ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**
**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**
**ಮಿಕ್ಕುದೆಲ್ಲಂ ಅವಿದ್ಯೆ"**
**–– ರಾಷ್ಟ್ರಕವಿ ಕುವೆಂಪು.**

# ಪರಿವಿಡಿ


| ಕ್ರ. ಸಂ | ವಿವರಗಳು | ಪುಟ ಸಂಖ್ಯೆ |
|---|---|---|
| 1 | ಪರಿಚಯ ಮತ್ತು ಪರಿಕಲ್ಪನಾ ಟಿಪ್ಪಣಿ | 1–4 |
| 2 | ವ್ಯಾಪ್ತಿ | 5 |
| 3 | ಉದ್ದೇಶಗಳು | 6 |
| 4 | ವ್ಯಾಖ್ಯಾನಗಳು | 7–8 |
| 5 | ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣಗಳು, ಪರಿಣಾಮಗಳು ಹಾಗೂ ಸವಾಲುಗಳು | 9–13 |
| 6 | ಒ.ಒ.ಎಸ್.ಸಿ, ಅಂಕಿ ಅಂಶಗಳು | 14–16 |
| 7 | ಪರಿಹಾರೋಪಾಯಗಳು | 17–27 |
| 8 | ಭಾಗೀದಾರರ ಕರ್ತವ್ಯಗಳು | 28–31 |
| 9 | ಪ್ರಕ್ರಿಯೆಗಳು, ವಿವರಣಾತ್ಮಕ ಅಂಶಗಳು, ಮೌಲ್ಯಮಾಪನ ಪ್ರಶ್ನೆಗಳು. | 32–36 |
| 10 | ಉಪಸಂಹಾರ | 37 |
| 11 | ಆಕರಗಳು | 38 |
| 12 | ತರಬೇತಿಯ ವೇಳಾ ಪಟ್ಟಿ | 39 |
| 13 | ಮರಳಿ ಬಾ ಮಗುವೆ……. | 40 |

## 1.2 ಪರಿಕಲ್ಪನಾ ಟಿಪ್ಪಣಿ

ನಿರೀಕ್ಷಿತ ಫಲ

- ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಹತ್ವ ಅರಿಯವರು.
- ಶಿಕ್ಷಣದ ಹಕ್ಕುಗಳನ್ನು ತಿಳಿಯುವವರು.

ಭಾರತ ದೇಶವು ಅನಾದಿ ಕಾಲದಿಂದಲೂ ಭವ್ಯ ಪರಂಪರೆಯನ್ನು ಹೊಂದಿರುವ ದೇಶ. ಶಿಕ್ಷಣಕ್ಕೆ ಇರುವ ಪ್ರಾಧಾನ್ಯತೆಯನ್ನು ನಾವು ಆಗಿನ ಕಾಲದ ಔಪಚಾರಿಕ ಶಿಕ್ಷಣ ಮತ್ತು ಶಿಕ್ಷಣ ವ್ಯವಸ್ಥೆ ಸಾಗಿಬಂದ ರೀತಿ ಗಮನಿಸಿದಾಗ ಶಿಕ್ಷಣದ ಮಹತ್ವ ತಿಳಿಯುತ್ತದೆ.

ಶಿಕ್ಷಣದಿಂದ ಮಾತ್ರ ಒಂದು ದೇಶದ ಸರ್ವೋತೋಮುಖ ಅಭಿವೃದ್ಧಿ ಸಾಧ್ಯ ಎಂಬ ನಿಲುವಿಗೆ ಬದ್ಧವಾಗಿ " **ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ**" ಯೋಜನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ಜಾರಿಗೆ ತಂದು ಅನುಷ್ಠಾನಗೊಳಿಸುತ್ತಿದೆ. ಶಿಕ್ಷಣದ ಹಕ್ಕು ಪ್ರತಿ ಮಗುವಿನ ಜನ್ಮತಃ ಹಕ್ಕಾಗಿದ್ದು, ಇದಕ್ಕೆ ಪೂರಕವಾಗಿ ನಮ್ಮ ಇಲಾಖೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದು, ಸಂಪೂರ್ಣ ದಾಖಲಾತಿ / ಕಲಿಕೆ ಸಾಧಿಸಲು ಸಾಧ್ಯವಾಗಿಲ್ಲ. ಇದಕ್ಕೆ ಹಲವಾರು ಕಾರಣಗಳನ್ನು ಪಟ್ಟಿ ಮಾಡುತ್ತಾ ಹೋದಾಗ "ಶಾಲೆಯನ್ನು ಬಿಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳು" ಈ ಸಮಸ್ಯೆ ಜ್ವಲಂತವಾಗಿ ಗೋಚರಿಸುತ್ತಿದೆ.



- ❖ ಶಾಲೆ ಬಿಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ನಾವು ನೀವೆಲ್ಲರೂ ಕಂಡುಕೊಳ್ಳಬೇಕಾದ ಮಾರ್ಗೋಪಾಯಗಳು ಯಾವುವು?
- ❖ ಈ ಸಮಸ್ಯೆಯನ್ನು ನಿವಾರಿಸುವಲ್ಲಿ ಭಾಗೀದಾರರ ಯಾರು?
- ❖ ಸಂವಿಧಾನದ ಯಾವ ಅಂಶಗಳು ಈ ಸಮಸ್ಯೆಯನ್ನು ನಿವಾರಿಸುವಲ್ಲಿ ನಮಗೆ ನಿರ್ದೇಶನ ನೀಡುತ್ತವೆ?
- ❖ OOSC ಸಮಸ್ಯೆಯನ್ನು ಬಗೆಹರಿಸುವಲ್ಲಿ ಈಗಿರುವ ಯೋಜನೆಗಳು ಯಾವುವು ಮತ್ತು ಅಳವಡಿಸಿಕೊಳ್ಳಬೇಕಾದ ಅಂಶಗಳು ಯಾವುವು?
- ❖ OOSC ಮಕ್ಕಳನ್ನು ಶಾಲೆಯ ಮುಖ್ಯವಾಹಿನಿಗೆ ಕರೆತರಲು ಇರುವ ಮುಖ್ಯ ಸವಾಲುಗಳಾವುವು?
- ❖ OOSC ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಶಿಕ್ಷಣ ಇಲಾಖೆಯ ಮತ್ತು ಸಮುದಾಯದ ಸಮನ್ವಯತೆಯನ್ನು ಸಾಧಿಸುವ ಮಾರ್ಗೋಪಾಯಗಳುಯಾವುವು ?

## 1.3 ಹಿನ್ನೆಲೆ

### ಶಿಕ್ಷಣ _ ಮಕ್ಕಳ ಹಕ್ಕು

- ಉತ್ತಮ ಶಿಕ್ಷಣ ಪಡೆಯುವುದು ಮಕ್ಕಳ ಹಕ್ಕು ಆಗಿದ್ದು, ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ವಿಶ್ವ ಸಂಸ್ಥೆಯು "**ಮಕ್ಕಳ ಹಕ್ಕುಗಳ ಘೋಷಣೆಗೆ**" ಎಲ್ಲಾ ದೇಶಗಳು ಬದ್ಧರಾಗುವಂತೆ ತಿಳಿಸಿವೆ.
- ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ 18 ವರ್ಷದೊಳಗಿನವರನ್ನು **ಮಗು** ಅಥವಾ **ಮಕ್ಕಳು** ಎಂದು ಪರಿಗಣಿಸಲಾಗಿದೆ.
- 1989 ರಲ್ಲಿ ವಿಶ್ವ ಸಂಸ್ಥೆಯು ಅಂಗೀಕರಿಸಿದ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ, ಭಾರತ ಸರ್ಕಾರವು 1992 ರಲ್ಲಿ ಒಪ್ಪಿಗೆ ನೀಡಿ ಸಹಿ ಮಾಡಿದೆ. ಈ ಒಡಂಬಡಿಕೆಗೆ ಜಗತ್ತಿನ 19 ರಾಷ್ಟ್ರಗಳು ಸಹಿ ಮಾಡಿದ್ದು ಮಕ್ಕಳ ಸಮಗ್ರ ಅಭಿವೃದ್ಧಿಗೆ ಪ್ರತಿಯೊಂದು ರಾಷ್ಟ್ರವು ಅನುಷ್ಠಾನ ಮಾಡುವ ಬಗ್ಗೆ ವಿವರಿಸಲಾಗಿದೆ.



## ಮಕ್ಕಳ ಒಡಂಬಡಿಕೆ ಪ್ರಕಾರ ಮಕ್ಕಳ ಪ್ರಮುಖ ಹಕ್ಕುಗಳು.

1. ಬದುಕುವ ಹಕ್ಕು
2. ರಕ್ಷಣೆಯ ಹಕ್ಕು
3. ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು
4. ಭಾಗವಹಿಸುವ ಹಕ್ಕು
5. 1989ರ ನವೆಂಬರ್ ನಲ್ಲಿ UNO ಸಾಮಾನ್ಯ ಸಭೆಯಲ್ಲಿ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಕೈಗೊಂಡ ಹಕ್ಕುಗಳು ಈ ಕಳಗಿನಂತೆ ಮುಂದುವರೆಯುತ್ತವೆ.
6. ಕುಟುಂಬ ಪರಿಸರದ ಹಕ್ಕು.
7. ಶಿಕ್ಷಣದ ಹಕ್ಕು.
8. ಸಾಮಾಜಿಕ ಭದ್ರತೆಯ ಹಕ್ಕು.
9. ಲೈಂಗಿಕ ಶೋಷಣೆಯ ವಿರುದ್ಧದ ಹಕ್ಕು
10. ಕಳ್ಳಸಾಗಣೆ ಮತ್ತು ಮಾರಾಟದ ವಿರುದ್ಧ ಹಕ್ಕು
11. ಬಾಲ ಕಾರ್ಮಿಕರ ಶೋಷಣೆಯ ವಿರುದ್ಧ ಹಕ್ಕು
12. ಆರೋಗ್ಯದ ಹಕ್ಕು
13. ಪೌಷ್ಟಿಕಾಂಶಗಳನ್ನು ಪಡೆಯುವ ಹಕ್ಕು
14. ಹಿಂಸಾಚಾರದಿಂದ ರಕ್ಷಣೆ ಪಡೆಯುವ ಹಕ್ಕು
15. ಅಭಿಪ್ರಾಯದ ಹಕ್ಕು
16. ಸಶಸ್ತ್ರ ಸಂಘರ್ಷದಿಂದ ರಕ್ಷಣೆ ಪಡೆಯುವ ಹಕ್ಕು

ಹೆಚ್ಚಿನ ಮಾಹಿತಿಗಾಗಿ :- https://en.m.wikipedia.org/wiki/Right_to_education

ವಿಶ್ವ ಸಂಸ್ಥೆಯ ಅಂಗಸಂಸ್ಥೆಯಾದ ಯುನೆಸ್ಕೊ ಸಂಸ್ಥೆಯು ಸದಸ್ಯ ರಾಷ್ಟ್ರಗಳಲ್ಲಿ ಶಿಕ್ಷಣದ ಹಕ್ಕಿಗಾಗಿ ಕೆಲವು ನಿಯಮಗಳನ್ನು ಹಾಕಿದೆ. ಇದರಲ್ಲಿ ಪರಿಚ್ಛೇದ-4 ರ ಪ್ರಕಾರ ಪ್ರಾಥಮಿಕ ಶಿಕ್ಷಣ ಉಚಿತ ಹಾಗೂ ಕಡ್ಡಾಯವಾಗಿರಬೇಕೆಂದು ಒತ್ತಿ ಹೇಳಿದೆ. ಅದೇ ರೀತಿ ಪರಿಚ್ಛೇದ-13 ಮತ್ತು 28ರಲ್ಲಿ **ಪ್ರಾಥಮಿಕ ಶಿಕ್ಷಣವು ಮೂಲಭೂತ ಹಕ್ಕು** ಎಂದು ಪ್ರತಿಪಾದಿಸಿದೆ.

ಶಿಕ್ಷಣ ನನ್ನ ಜನ್ಮ ಸಿದ್ದ ಹಕ್ಕು ಅದನ್ನು
ನಾನು ಪಡೆಯಲು ಸಹಕರಿಸಿ

## 1.4 ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹಕ್ಕು ನಡೆದು ಬಂದ ಹಾದಿ

- 1881 ರಲ್ಲಿ ಬ್ರಿಟೀಷ್ ಸರ್ಕಾರ ತನ್ನ ನಾಗರೀಕರಿಗೆ (ಇಂಗ್ಲೆಂಡ್) ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿ ಮಾಡಿತು. ಈ ಕುರಿತು ದಾದಾಬಾಯಿ ನವರೋಜಿರವರು 1882 ರ ಕಾಮನ್‌ವೆಲ್ತ್ ಶೃಂಗ ಸಭೆಯಲ್ಲಿ ಬ್ರಿಟೀಷರು ಅವರ ದೇಶದಲ್ಲಿ ಜಾರಿಗೊಳಿಸಿದ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಸೌಲಭ್ಯವನ್ನು ಭಾರತೀಯರಿಗೆ ನೀಡದಿರುವುದು ನ್ಯಾಯಸಮ್ಮತವಲ್ಲವೆಂದು ವಾದಿಸಿದರು. ಅಲ್ಲಿಂದಲೇ ಭಾರತದಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯ ಪ್ರಾರಂಭವಾಯಿತು.
- 1908 ರಲ್ಲಿ ಬರೋಡ ಸಂಸ್ಥಾನ ಹಾಗೂ 1914 ರಲ್ಲಿ ಮೈಸೂರು ಸಂಸ್ಥಾನವೂ ತಮ್ಮ ರಾಜ್ಯಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಸೂದೆಯನ್ನು ಅಂಗೀಕರಿಸಿತು.
- 1910 ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಇಂತಹ ಮಸೂದೆಯನ್ನು ಬ್ರಿಟೀಷ್ ಸಂಸತ್ತಿನಲ್ಲಿ ಮಂಡಿಸಿದರು. ಈ ಮಸೂದೆ ಅಂಗೀಕಾರವಾಗುವುದರಲ್ಲಿ ವಿಫಲವಾದರೂ ಹೆಚ್ಚಿನ ಜನರ ಒತ್ತಾಯದಿಂದ 1918 ರಲ್ಲಿ ಅಂಗೀಕರಿಸಲ್ಪಟ್ಟಿತು. ಅಲ್ಲಿಂದ ಈಚೆಗೆ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸಲಾಯಿತು.
- 1950 ರಲ್ಲಿ ಭಾರತ ಸಂವಿಧಾನ ಅಂಗೀಕರಿಸಿದಾಗ ಭಾರತದ ಸಾಕ್ಷರತಾ ಪ್ರಮಾಣ ಶೇ% 16 ರಷ್ಟಿದ್ದು, ಪ್ರಾಥಮಿಕ ಶಿಕ್ಷಣದ ದಾಖಲಾತಿ ಶೇ% 40 ರಷ್ಟಿತ್ತು. ಸಂವಿಧಾನದ 45ನೇ ವಿಧಿಯಲ್ಲಿ **ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ** ನೀಡುವ ಪ್ರಸ್ತಾಪವನ್ನು ಮಾಡಲಾಯಿತು.

- 1966 ಕೋಠಾರಿ ಆಯೋಗ, 1976 ಮಹಿಳಾ ಆಯೋಗ, 1986 ರಾಷ್ಟ್ರೀಯ ಶಿಕ್ಷಣ ನೀತಿ ಇವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸುವಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿದವು.
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಕಾಯ್ದೆ-2009 ರ ಪ್ರಕಾರ ಯಾವುದೇ ಮಗು ಶಿಕ್ಷಣದಿಂದ ವಂಚಿತರಾಗವುದನ್ನು ತಡೆದಿದೆ.

ನಿರೀಕ್ಷಿತ ಫಲ

- ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಒಳಪಡುವ ಮಕ್ಕಳ ವಯಸ್ಸಿನ ವ್ಯಾಪ್ತಿಯನ್ನು ಅರಿಯುವರು.

# 2. ವ್ಯಾಪ್ತಿ

## ಚಿಂತನ..

## ಜಗತನ್ನೇ ಬದಲಾಯಿಸಲು ಶಿಕ್ಷಣವೇ ಪ್ರಬಲ ಅಸ್ತ್ರ

### ಇದನ್ನು ಹೇಗೇ ಸಮರ್ಥಿಸುವಿರಿ.

ಶಾಲೆಯಿಂದ ಹೊರಗುಳಿದ ಮತ್ತು ಶಾಲೆ ಬಿಟ್ಟ ಮಕ್ಕಳ ವ್ಯಾಪಿಯ ಸರ್ವ ಶಿಕ್ಷಣ ಅಭಿಯಾನದ ಪ್ರಕಾರ 03 ರಿಂದ 14 ವರ್ಷಗಳಾಗಿದ್ದು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಪ್ರಕಾರ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಹಿರಿಯ ಮತ್ತು ಪ್ರೌಢ ಶಾಲಾ ಶಿಕ್ಷಣದವರೆಗೂ (03 ರಿಂದ 18) ವ್ಯಾಪಿಸಿದೆ.

ಪ್ರತಿ ಮಗುವಿಗೆ "**ಉಚಿತ ಮತ್ತು ಕಡ್ಡಾಯ ಶಿಕ್ಷಣ**" ನೀಡುವುದು ನಮ್ಮ ಶಿಕ್ಷಣ ಇಲಾಖೆಯ ಧ್ಯೇಯವಾಗಿದೆ. ಶಿಕ್ಷಣದಿಂದ ಮಾತ್ರ ಒಂದು ಸುಸಂಘಟಿತ ಮಾನವ ಸಂಪನ್ಮೂಲವು ನಿರ್ಮಾಣಗೊಳ್ಳಲು ಸಾಧ್ಯ ಆದ್ದರಿಂದ ಶಿಕ್ಷಣ ಹಾಗೂ ಆರೋಗ್ಯ ಈ ಎರಡೂ ಅಂಶಗಳ ಸಾಧನೆಗಾಗಿ ನಿರಂತರವಾಗಿ ಹಲವು ಪ್ರಯತ್ನಗಳು ಸಾಗುತ್ತಿವೆಯಾದರೂ ಸಂಪೂರ್ಣ ಯಶಸ್ಸು ಸಾಧ್ಯವಾಗಿಲ್ಲ.

ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದಲ್ಲಿ ಸಾರ್ವತಿಕ ಶಿಕ್ಷಣಕ್ಕಾಗಿ ಹಲವಾರು ಹೋರಾಟಗಳು, ಪ್ರಯತ್ನಗಳು ನಡೆಯುತ್ತಿದ್ದು ಅಂದಿನಿಂದ ಇಂದಿನವರೆಗೂ ಸಂಪೂರ್ಣ ಯಶ್ಸಸನ್ನು ಕಾಣುವಲ್ಲಿ ವಿಫಲರಾಗಿರುವುದು ಗಮನೀಯ ಅಂಶವಾಗಿದೆ. ಔಪಚಾರಿಕ ಶಿಕ್ಷಣ ಮತ್ತು ಅದು ನಡೆದು ಬಂದ ದಾರಿ ಕುರಿತು ಈಗಾಗಲೇ ತಿಳಿದಿದೆ. ಎಲ್ಲಾ ಮಕ್ಕಳು ಶಾಲೆಗೆ ದಾಖಲಾದಲ್ಲಿ ನಿರೀಕ್ಷಿತ ಗುಣಮಟ್ಟವನ್ನು ತಲುಪಲು ಸಾಧ್ಯ

- **ವಿವಿಧ ವಯೋಮಾನದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ನಿರ್ಧಿಷ್ಟ ತರಗತಿಗಳಿಗೆ ದಾಖಲಿಸಿಕೊಳ್ಳಲು ಅನುಸರಿಸಬೇಕಾದ ಮಾನದಂಡಗಳು ಯಾವುವು?**

# 3 ತರಬೇತಿ ಸಾಹಿತ್ಯದ ಉದ್ದೇಶಗಳು

1. ವಿವಿಧ ವಯೋಮಾನಗಳಲ್ಲಿ ಮಕ್ಕಳು ಶಾಲೆಯನ್ನು ಬಿಡಲು ಕಾರಣವಾದ ಅಂಶಗಳನ್ನು ಗುರುತಿಸುವುದು.
2. ಮಕ್ಕಳ ಶಾಲೆಗೆ ಕರೆತರಲು ವಿವಧ ಕ್ರಮಗಳನ್ನು ಆಯೋಜಿಸುವುದು.
3. ಶಾಲೆಗೆ ದಾಖಲಾದ ಮಕ್ಕಳಿಗೆ ಆಸಕ್ತಿದಾಯಕ ಹಾಗೂ ಪರಿಣಾಮಕಾರಿ ಗುಣಮಟ್ಟದ ಶಿಕ್ಷಣವನ್ನು ನೀಡುವುದು.
4. ಮುಂದಿನ ಭವಿಷ್ಯ ರೂಪಿಸಿಕೊಳ್ಳುವ ಅಗತ್ಯವಾದ ಬುನಾದಿ ಒದಗಿಸುವುದು.
5. ಶಾಲಾ ಶಿಕ್ಷಣದಲ್ಲಿ ಎಲ್ಲಾ ಭಾಗೀದಾರರ ಒಳ್ಳಗೊಳ್ಳುವಿಕೆಯನ್ನು ನಿರಂತರವಾಗಿ ಪ್ರೋತ್ಸಾಹಿಸಿವುದು.

.

ಮಕ್ಕಳು , ಮನುಕುಲದ ಆಶಾ ಕುಸುಮಗಳು
ಮನೆಯಂಗಳ ಬೆಳಗುವ ನಂದಾದೀಪಗಳು
ಅವು ಬಾಡದಂತೆ , ಆರದಂತೆ
ನೋಡಿಕೊಳ್ಳುವ ಜವಾಬ್ದಾರಿ ನಮ್ಮದಲ್ಲವೇ _.?

ಹಾಗಾದರೆ ಮಧ್ಯದಲ್ಲಿ ಶಾಲೆ ಬಿಟ್ಟವರೆಷ್ಟು_.?
ಶಾಲೆಗೆ ದಾಖಲಾಗದಿರುವ ಮಕ್ಕಳೆಷ್ಟು __?
ಕಾರಣಗಳೇನು ? ಗುರುತಿಸ ಬಲ್ಲಿರಾ__.. ?

# 4. ವ್ಯಾಖ್ಯಾನಗಳು

ನಿರೀಕ್ಷಿತ ಫಲ

- ಶಾಲೆ ಬಿಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ನಡುವಿನ ಅರ್ಥವನ್ನು ಮತ್ತು ವ್ಯತ್ಯಾಸ ಅರಿಯುವರು.

ಶಾಲೆ ಬಿಟ್ಟ ಮಗು ಎಂದರೆ ಒಂದು ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ ಕಾರಣಗಳನ್ನು ಹೊರತುಪಡಿಸಿ, ನಿರಂತರವಾಗಿ 7 ದಿನಗಳಿಗಿಂತ ಹೆಚ್ಚುಕಾಲ ಶಾಲೆಗೆ ಗೈರು ಹಾಜರಾಗಿರುವುದು.

ಶಾಲೆಯಿಂದ ಹೊರಗುಳಿದ ಮಗು ಎಂದರೆ ಅರ್ಹ ವಯಸ್ಸಿನ (3 ರಿಂದ 18) ಮಗು ಯಾವುದೇ ಶಾಲೆಗೆ ದಾಖಲಾಗದೇ ಇರುವುದು.

- ➢ ಮಕ್ಕಳು ವಿವಿಧ ಹಂತಗಳಲ್ಲಿ ಶಾಲೆಯಿಂದ ಹೊರಗುಳಿಯಲು ಕಾರಣವಾಗುವ ಅಂಶಗಳು ಯಾವುವು ?
- ➢ ಸಾಮಾಜಿಕ- ಭೌತಿಕ – ಸಂವೇದನಾತ್ಮಕ ಅಂಶಗಳು, ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣವಾಗುತ್ತವೆಯೇ ? ಹೇಗೆ ?
- ➢ ಶಾಲೆಯಿಂದ ಹೊರಗುಳಿದ / ಬಿಟ್ಟ ಮಕ್ಕಳನ್ನು ಹೇಗೆ ವ್ಯತ್ಯಾಸಿಸುವಿರಿ?

ರಾಷ್ಟ್ರದ ಸುಸ್ಥಿರ ಅಭಿವೃದ್ಧಿ, ವೈಯಕ್ತಿಕ ಪ್ರಗತಿ ನಿಸರ್ಗ ಪೂರಕ ಜೀವನಕ್ಕೆ ಶಿಕ್ಷಣ ತಳಹದಿಯಾಗಿದ್ದು, ಮಕ್ಕಳು ಶಾಲೆಯಿಂದ ಹೊರಗುಳಿದು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಮೂಲಭೂತ ಕರ್ತವ್ಯವಾಗಿದೆ. ಈಗಲೂ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಗಣನೀಯವಾಗಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳ ಅಂಕಿಅಂಶಗಳನ್ನು ಗಮನಿಸಿದಾಗ ಅದರ ಗಂಭೀರತೆ ಅರಿವಾಗುತ್ತದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಪ್ರಾಥಮಿಕ ಶಿಕ್ಷಣದ ಬಹಳ ಮುಖ್ಯವಾದ ಜವಾಬ್ದಾರಿಯಾಗಿದೆ. ಶಾಲೆಗೆ ದಾಖಲಾಗುವ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಿಸಿ, ಅವರು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ಮಾಡುವುದು ಶಿಕ್ಷಣ ಕ್ಷೇತ್ರದ ಎಲ್ಲಾ ಭಾಗೀದಾರರ ಆದ್ಯ ಕರ್ತವ್ಯವಾಗಿದೆ. ಕಲಿಕೆಯಲ್ಲಿ ಗುಣಮಟ್ಟವನ್ನು ಸಾಧಿಸಲು ನಿರಂತರ ಹಾಜರಾತಿ ಅತಿ ಮುಖ್ಯವಾಗಿದೆ.

- ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗಲು ನೀವು ಕಂಡುಕೊಂಡ ಮಾರ್ಗೋಪಾಯಗಳಾವುವು?

ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸಿ ಜಾರಿಗೆ ತರಲಾಗುತ್ತಿದೆ. ಇದರಿಂದ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಾಗುತ್ತಿದೆ. ಶಾಲೆಗೆ ಬರುವ ಮಕ್ಕಳ ಹಾಜರಾತಿಯನ್ನು ನಿರಂತರವಾಗಿ ಕಾಯ್ದುಕೊಳ್ಳಲು ಹಲವು ಪ್ರೋತ್ಸಾಹದಾಯಕ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಇದರೆಲ್ಲದರ ನಡುವೆಯೂ ವಿವಿಧ ಕಾರಣಗಳಿಂದ ಮಕ್ಕಳು ಶಾಲೆಗೆ ಹಾಜರಾಗದಿರುವುದು ಮತ್ತು ದಾಖಲಾಗಿ ಶಾಲೆಯಿಂದ ಹೊರಗುಳಿಯುತ್ತಿರುವುದು ಕಂಡು ಬರುತ್ತಿದೆ.

ಶಾಲೆಯಿಂದ ಹೊರ ಉಳಿದಿರುವ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಇತರೆ ಭಾಗೀದಾರರು ಆ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವ ಪ್ರಯತ್ನಗಳನ್ನು ಗಂಭೀರವಾಗಿ ಮಾಡಬೇಕಾಗಿದೆ.



## 5.0 ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣಗಳು.

ನಿರೀಕ್ಷಿತ ಫಲ

- ಮಕ್ಕಳು ಶಾಲೆಯಿಂದ ಹೊರಗುಳಿಯಲು ಮತ್ತು ಬಿಡಲು ಕಾರಣಗಳನ್ನು ಕಂಡು ಕೊಳ್ಳುವರು
- ಶಾಲೆ ಬಿಟ್ಟ ಮತ್ತು ಹೊರಗುಳಿದ ಮಕ್ಕಳಿಂದ ಆಗುವ ಪರಿಣಾಮಗಳನ್ನು ತಿಳಿಯುವರು.

1. ಬಾಲ ಕಾರ್ಮಿಕರು
2. ಲಿಂಗ ಅಸಮಾನತೆ
3. ಬಾಲ್ಯ ವಿವಾಹ
4. ಬಡತನ
5. ಪೋಷಕರ ನಿರಾಸಕ್ತಿ
6. ನೈಸರ್ಗಿಕ ವಿಕೋಪಗಳು
7. ಸಾರಿಗೆ ವ್ಯವಸ್ಥೆ ಕೊರತೆ
8. ವಿಶೇಷ ಚೇತನರು
9. ಹೆಣ್ಣು ಮಕ್ಕಳ ವೈಯಕ್ತಿಕ ಕಾರಣ
10. ಸುರಕ್ಷತೆಯ ಕೊರತೆ
11. ಶಿಕ್ಷಕರು ಮತ್ತು ಪರೀಕ್ಷೆಯ ಭಯ
12. ಆರ್ಥಿಕ ಸಮಸ್ಯೆ
13. ಮಾನಸಿಕ ಅನಾರೋಗ್ಯ
14. ಕುಟುಂಬ ವಲಸೆ / ಕಲಹ
15. ಸ್ಥಳೀಯವಾಗಿ ಉನ್ನತ ಶಿಕ್ಷಣ ಸಂಸ್ಥೆಗಳಿಲ್ಲದಿರುವುದು
16. ಶಿಕ್ಷಣ ಮಹತ್ವದ ಅರಿವಿಲ್ಲದಿರುವುದು

# 5.3 ಶಾಲೆಯಿಂದ ಹೊರಗುಳಿದ / ಬಿಟ್ಟ ಮಕ್ಕಳ ಸಮಸ್ಯೆಯಿಂದ ಉಂಟಾಗುವ ಪರಿಣಾಮಗಳು

**1. ಸೀಮಿತ ಅವಕಾಶಗಳು**

ಶಿಕ್ಷಣವಿಲ್ಲದೆ ಮಕ್ಕಳು ಉದ್ಯೋಗ ಮತ್ತು ಆರ್ಥಿಕ ಪ್ರಗತಿಗೆ ಸೀಮಿತ ನಿರೀಕ್ಷೆಗಳನ್ನು ಎದುರಿಸುತ್ತಾರೆ. ಬಡತನ ಮತ್ತು ಸಾಮಾಜಿಕ, ಆರ್ಥಿಕ ಅಸಮಾನತೆಯ ಚಕ್ರವನ್ನು ಶಾಶ್ವತ ಗೊಳಿಸುತ್ತಾರೆ.

**2. ಸಾಮಾಜಿಕ ಸಮಸ್ಯೆಗಳು**

ಶಿಕ್ಷಣದ ಕೊರತೆ ಬಾಲ್ಯ ವಿವಾಹ, ಬಾಲ ಕಾರ್ಮಿಕರು ಮತ್ತು ಶೋಷಣೆ ಮತ್ತು ಕಳ್ಳ ಸಾಗಾಣಿಕೆಗೆ ಒಳಗಾಗುವಂತಹ ಸಮಸ್ಯೆಗಳಿಗೆ ಎಡೆ ಮಾಡುತ್ತದೆ .

**3. ಸುಶಿಕ್ಷಿತ ಮಾನವ ಸಂಪನ್ಮೂಲ ಕೊರತೆ**

ಸುಶಿಕ್ಷಿತ ಮಾನವ ಸಂಪನ್ಮೂಲ ಕೊರತೆ ದೇಶದ ಆರ್ಥಿಕ, ತಾಂತ್ರಿಕ , ವೈಜ್ಞಾನಿಕ ಬೆಳವಣಿಗೆಗೆ ತರಬಹುದಾದ ಸಂಭಾವ್ಯ ಪ್ರಯೋಜನಗಳಿಂದ ದೇಶವನ್ನು ವಂಚಿತಗೊಳಿಸುತ್ತದೆ

**ಹೆಚ್ಚಿನ ಮಾಹಿತಿಗಾಗಿ:–** https://images.app.goo.gl/9Q15k5NY6HapSZs27

## 5.4 ಶಾಲೆಯಿಂದ ಹೊರಗುಳಿದ ಮಕ್ಕಳ ಸಮಸ್ಯೆಗೆ ಸವಾಲುಗಳು

1. **ಅನುಷ್ಠಾನದ ಅಂತರಗಳು**

ಅಸಮರ್ಪಕ ಮೂಲಸೌಕರ್ಯ, ಅಸಮರ್ಥತೆ, ಅರ್ಹ ಶಿಕ್ಷಕರ ಕೊರತೆ ಮತ್ತು ಅಧಿಕಾರ ಶಾಹಿಯ ಅಸಮರ್ಥತೆಗಳು ಶೈಕ್ಷಣಿಕ ನೀತಿಗಳು ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅಡ್ಡಿಯಾಗುತ್ತವೆ.

2. **ಸಾಮಾಜಿಕ ಆರ್ಥಿಕ ಅಡೆ ತಡೆಗಳು**

ಬಡತನ ತಾರತಮ್ಯ ಮತ್ತು ಸಾಂಸ್ಕೃತಿಕ ರೂಡಿಗಳು ಮಕ್ಕಳ ಶಿಕ್ಷಣಕ್ಕೆ ವಿಶೇಷವಾಗಿ ಹುಡುಗಿಯರು ಮತ್ತು ಅಳಿವಿನ ಅಂಚಿನಲ್ಲಿರುವ ಸಮುದಾಯಗಳಿಗೆ ಪ್ರವೇಶವನ್ನು ತಡೆಯುತ್ತದೆ. ಬಾಲಕಾರ್ಮಿಕರು ಮತ್ತು ಮಕ್ಕಳ ಮನೆಯ ಆದಾಯಕ್ಕೆ ಕೊಡುಗೆ ನೀಡುವ ಅಗತ್ಯತೆ ಸೇರಿದಂತೆ ಆರ್ಥಿಕ ನಿರ್ಬಂಧಗಳು ಮಕ್ಕಳನ್ನು ಶಾಲೆಗೆ ಹೋಗದಂತೆ ತಡೆಯುತ್ತವೆ, ಬಡತನವನ್ನು ಪರಿಹರಿಸುವುದು ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಈ ಸವಾಲುಗಳನ್ನು ನಿವಾರಿಸಲು ಮತ್ತು ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.

3. **ಶಿಕ್ಷಣದ ಗುಣಮಟ್ಟ**

ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಖಾತ್ರಿ ಪಡಿಸುವುದು ಸವಾಲಾಗಿಯೇ ಉಳಿದಿದೆ ಏಕೆಂದರೆ ಪ್ರಾಥಮಿಕವಾಗಿ ಕಲಿಕೆಯ ಫಲಿತಾಂಶಗಳಿಗಿಂತ ದಾಖಲಾತಿಗೆ ಗಮನ ನೀಡಲಾಗಿದೆ ಮಕ್ಕಳನ್ನು ಶಾಲೆಗೆ ಸೇರಿಸಿದರು ಅವರು ಪಡೆಯುವ ಶಿಕ್ಷಣದ ಗುಣಮಟ್ಟವು ಮುಖ್ಯವಾಗಿದೆ ಕಳಪೆ ಮೂಲಸೌಕರ್ಯ ಅಸಮರ್ಪಕ ಸಂಪನ್ಮೂಲಗಳು ಶಿಕ್ಷಕರ ಕೊರತೆ ಮತ್ತು ಬೋಧನಾ ವಿಧಾನಗಳು ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳು ಮತ್ತು ಪ್ರೇರಣೆಗೆ ಅಡ್ಡಿಯಾಗಬಹುದು ಮುಂದುವರಿದ ದಾಖಲಾತಿ ಉತ್ತೇಜಿಸಲು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಅತ್ಯಗತ್ಯ.

4. **ಶಿಕ್ಷಣಕ್ಕೆ ಪ್ರವೇಶ**

ಅನೇಕ ಶಾಲೆಯಿಂದ ಹೊರಗುಳಿದ ಮಕ್ಕಳು ತಮ್ಮ ಸುತ್ತಮುತ್ತಲಿನ ಶಾಲೆಗಳ ಕೊರತೆ ಅಸಮರ್ಪಕ ಸಾರಿಗೆ ಸೌಲಭ್ಯಗಳು ಮತ್ತು ಗ್ರಾಮೀಣ ಅಥವಾ ದೂರದ ಪ್ರದೇಶಗಳಲ್ಲಿನ ಶಾಲೆಗಳ ಸೀಮಿತ ಲಭ್ಯತೆಯಂತಹ ಶಿಕ್ಷಣವನ್ನು ಪ್ರವೇಶಿಸಲು ಅಡೆತಡೆಗಳನ್ನು ಎದುರಿಸುತ್ತಾರೆ. ಎಲ್ಲಾ ಮಕ್ಕಳಿಗೆ ಅವರ ಸ್ಥಳ ಗ್ರಾಮೀಣ ನಗರ ಪ್ರದೇಶಗಳು ಅಥವಾ ಸಾಮಾಜಿಕ ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ ಸಮಾನ ಪ್ರವೇಶವು ನಿರ್ಣಾಯಕವಾಗಿದೆ.

5. **ಲಿಂಗ ಅಸಮಾನತೆಗಳು**

ನಿರ್ದಿಷ್ಟವಾಗಿ ಹುಡುಗಿಯರು ಸಾಮಾಜಿಕ ರೂಢಿಗಳು ಸಾಂಸ್ಕೃತಿಕ ಆಚರಣೆಗಳು ಬಾಲ್ಯವಿವಾಹ ಮತ್ತು ಲಿಂಗ ಆಧಾರಿತ ತಾರತಮ್ಯದಿಂದಾಗಿ ಶಿಕ್ಷಣಕ್ಕೆ ಹೆಚ್ಚುವರಿ ಅಡೆತಡೆಗಳನ್ನು ಎದುರಿಸುತ್ತಾರೆ ಎಲ್ಲಾ ಮಕ್ಕಳಿಗೆ ಸಮಾನ ಪ್ರವೇಶ ಮತ್ತು ಅವಕಾಶಗಳನ್ನು ಖಚಿತ ಪಡಿಸಿಕೊಳ್ಳಲು ಹೆಣ್ಣು ಮಕ್ಕಳನ್ನು ಸಬಲೀಕರಣಗೊಳಿಸುವುದು ಮತ್ತು ಶಿಕ್ಷಣದಲ್ಲಿ ಲಿಂಗ ಅಸಮಾನತೆಗಳನ್ನು ಪರಿಹರಿಸುವುದು ಬಹಳ ಮುಖ್ಯ.

6. **ಅಂಚಿನಲ್ಲಿರುವ ಗುಂಪುಗಳ ಸೇರ್ಪಡೆ**

ಬುಡಕಟ್ಟು ಸಮುದಾಯಗಳು ವಿಕಲಾಂಗ ಮಕ್ಕಳು ಮತ್ತು ವಲಸೆ ಮಕ್ಕಳು ಸೇರಿದಂತೆ ಅಂಚಿನಲ್ಲಿರುವ ಸಮುದಾಯಗಳ ಮಕ್ಕಳು ಶಿಕ್ಷಣವನ್ನು ಪ್ರವೇಶಿಸುವಲ್ಲಿ ಹೆಚ್ಚುವರಿ ಸವಾಲುಗಳನ್ನು ಎದುರಿಸುತ್ತಾರೆ ಅದರ ನಿರ್ದಿಷ್ಟ ಅಗತ್ಯತೆಗಳನ್ನು ಪರಿಹರಿಸಲು ಅಂತರ್ಗತ ಶಿಕ್ಷಣವನ್ನು ಒದಗಿಸಲು ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಅವರ ಸಂಪೂರ್ಣ ಭಾಗವಹಿಸುವಿಕೆಯನ್ನು ಖಚಿತ ಪಡಿಸಿಕೊಳ್ಳಲು ಪ್ರಯತ್ನಗಳನ್ನು ಮಾಡಬೇಕು.



## 7. ಅರಿವು ಮತ್ತು ಪೋಷಕರ ಜಾಗೃತ ಮನೋಭಾವ

ಅನೇಕ ಪೋಷಕರು ಶಿಕ್ಷಣದ ಪ್ರಾಮುಖ್ಯತೆಯ ಬಗ್ಗೆ ತಿಳಿದಿರುವುದಿಲ್ಲ, ತಮ್ಮ ಬೆಂಬಲವನ್ನು ಅಡ್ಡಿ ಪಡಿಸುವ ಸಾಂಸ್ಕೃತಿಕ ಅಡೆತಡೆಗಳನ್ನು ಉತ್ತೇಜಿಸುವುದು ಪೋಷಕರ ಮತ್ತು ಸಮುದಾಯದ ಒಳಗೊಳ್ಳುವಿಕೆ ಈ ಸವಾಲುಗಳನ್ನು ಜಯಿಸುವುದು ನಿರ್ಣಾಯಕವಾಗಿದೆ.

## 8. ಡೇಟಾ ಮತ್ತು ಮಾನಿಟರಿಂಗ್

ಪರಿಣಾಮಕಾರಿ ನೀತಿ ಯೋಜನೆ ಮತ್ತು ಮೇಲ್ವಿಚಾರಣೆಯ ಪ್ರಗತಿಗಾಗಿ ಶಾಲೆಯಿಂದ ಹೊರಗಿರುವ ಮಕ್ಕಳ ಬಗ್ಗೆ ನಿಖರವಾದ ಮತ್ತು ನವೀಕೃತ ಡೇಟಾ ಅತ್ಯಗತ್ಯ. ದತ್ತಾಂಶ ಸಂಗ್ರಹಣ ವ್ಯವಸ್ಥೆಗಳನ್ನು ಬಲಪಡಿಸುವುದು ಮತ್ತು ನಿಯಮಿತ ಸಮೀಕ್ಷೆಗಳನ್ನು ನಡೆಸುವುದು ಶಾಲೆಯಿಂದ ಹೊರಗಿರುವ ಳ ಹೆಚ್ಚಿನ ದರವನ್ನು ಹೊಂದಿರುವ ಪ್ರದೇಶಗಳನ್ನು ಗುರುತಿಸಲು ಮತ್ತು ಗುರಿಯಾಗಿಸಲು ಸಹಾಯ ಮಾಡುತ್ತದೆ.

1. ಹೆಚ್ಚಿನ ಮಾಹಿತಿಗಾಗಿ : – https://en.m.wikipedia.org/wiki/Mainstreaming_(education)

2. ಹೆಚ್ಚಿನ ಮಾಹಿತಿಗಾಗಿ

   https://search.app/?link=https%3A%2F%2Fuis%2Eunesco%2Eorg%2Fsites%2Fdefault%2Ffiles%2Fdocuments%2Festimating%2Dthe%2Dnumber%2Dof%2Dout%2Dof%2Dschool%2Dchildren%2Dindia%2Dcase%2Dstudy%2D2016%2Den%2Epdf&utm_source=igadl%2Cigatpdl%2Csh%2Fx%2Fgs%2Fm2%2F5

# 6. ಅಂಕಿ ಅಂಶಗಳು.

**ನಿರೀಕ್ಷಿತ ಫಲ**

- **ಶಾಲೆಯನ್ನು ಬಿಟ್ಟ ಶೇಕಡವಾರು ಮಕ್ಕಳ ಮಾಹಿತಿಯನ್ನು ತಿಳಿಯುವರು.**
- **ಶಾಲೆ ಬಿಟ್ಟ ಮಕ್ಕಳ ಶೇಕಡವಾರು ಲಿಂಗಾನುಪಾತ ಹೋಲಿಕೆ ಮಾಡುವರು.**

- 2021 ರ ಪ್ರಕಾರ

**State-wise data regarding Out of School Children (OoSC)**

**State-wise data regarding Out of School Children (OoSC)**

| Sl. No. | State/ UT | Projected population of 2019 by age-groups | | | | Estimate using 75th round NSS education survey of 2017-18 rates | | OOSC from Source: AWP&B 2019-20 (6-14 yrs) |
|---|---|---|---|---|---|---|---|---|
| | | 6-10 | 11-13 | 14-15 | 16-17 | OOSC age 6 yrs to less than 14 yrs | OOSC age 6 yrs to less than 18 yrs | |
| 3 | Arunachal Pradesh | 143,976 | 100,241 | 69,041 | 63,851 | 18,619 | 43,055 | **932** |
| 4 | Assam | 3,179,000 | 2,029,800 | 1,355,000 | 1,360,800 | 145,096 | 843,384 | **86,094** |
| 5 | Bihar | 13,986,600 | 8,458,200 | 5,512,200 | 5,446,200 | 1,587,916 | 3,900,816 | **144,380** |
| 6 | Chandigarh | 107,806 | 65,515 | 46,291 | 49,955 | 2,642 | 7,527 | **3,658** |
| 7 | Chhattisgarh | 2,730,000 | 1,600,000 | 1,086,600 | 1,106,000 | 165,915 | 548,845 | **23,431** |
| 8 | Dadra and Nagar Haveli | 42,787 | 25,045 | 15,161 | 14,642 | 2,036 | 9,874 | **33** |
| 9 | Daman and Diu | 21,310 | 12,262 | 8,536 | 10,834 | 5,195 | 7,246 | **128** |
| 10 | Delhi | 1,505,000 | 928,400 | 658,800 | 690,200 | 105,753 | 230,816 | **44,932** |
| 11 | Goa | 125,406 | 78,397 | 53,790 | 54,297 | 244 | 355 | **204** |
| 12 | Gujarat | 5,737,200 | 3,446,400 | 2,359,000 | 2,412,000 | 360,895 | 1,581,660 | **67,135** |
| 13 | Haryana | 2,457,800 | 1,478,800 | 1,021,800 | 1,050,600 | 119,929 | 454,578 | **29,008** |
| 14 | Himachal Pradesh | 531,400 | 342,400 | 235,600 | 242,000 | 2,922 | 29,394 | **4,726** |
| 15 | Jammu & Kashmir (UT) | 1,175,200 | 861,400 | 560,200 | 548,800 | 49,113 | 183,736 | **11,762** |
| 16 | Jharkhand | 3,788,800 | 2,389,600 | 1,589,600 | 1,594,800 | 211,967 | 854,622 | **53,833** |
| 17 | Karnataka | 5,067,600 | 3,095,200 | 2,127,200 | 2,179,600 | 189,608 | 932,025 | **10,448** |
| 18 | Kerala | 2,477,600 | 1,528,800 | 1,033,000 | 1,046,200 | 923 | 37,699 | **4,039** |
| 19 | Ladakh | 27,592 | 17,632 | 12,289 | 12,414 | 1,080 | 4,102 | |
| 20 | Lakshadweep | 6,501 | 4,246 | 2,816 | 2,943 | - | 710 | - |
| 21 | Madhya Pradesh | 8,193,000 | 4,703,400 | 3,189,600 | 3,246,600 | 854,603 | 2,858,100 | **45,890** |

## State-wise data regarding Out of School Children (OoSC)

| Sl. No. | State/ UT | Projected population of 2019 by age-groups | | | | Estimate using 75th round NSS education survey of 2017-18 rates | | OOSC from Source: AWP&B 2019-20 (6-14 yrs) |
|---|---|---|---|---|---|---|---|---|
| | | 6-10 | 11-13 | 14-15 | 16-17 | OOSC age 6 yrs to less than 14 yrs | OOSC age 6 yrs to less than 18 yrs | |
| 22 | Maharashtra | 9,260,400 | 5,906,000 | 4,053,000 | 4,144,000 | 323,949 | 1,415,630 | **35,304** |
| 23 | Manipur | 245,057 | 176,828 | 120,988 | 115,385 | 5,792 | 33,974 | **2,541** |
| 24 | Meghalaya | 320,639 | 216,291 | 139,434 | 138,933 | 11,355 | 76,228 | **10,405** |
| 25 | Mizoram | 97,585 | 66,082 | 43,937 | 46,476 | 3,301 | 12,973 | **2,719** |
| 26 | Nagaland | 197,521 | 140,751 | 95,345 | 96,275 | 13,871 | 51,516 | **4,017** |
| 27 | Odisha | 3,697,000 | 2,327,200 | 1,586,000 | 1,618,200 | 197,164 | 1,206,136 | **10,216** |
| 28 | Puducherry | 119,055 | 74,941 | 51,329 | 50,263 | 3,001 | 11,180 | **36** |
| 29 | Punjab | 2,125,400 | 1,343,600 | 948,600 | 991,200 | 85,817 | 363,577 | **5,172** |
| 30 | Rajasthan | 7,763,800 | 4,588,800 | 3,105,800 | 3,155,200 | 860,765 | 2,370,395 | **113,094** |
| 31 | Sikkim | 48,913 | 38,145 | 26,254 | 28,108 | 555 | 2,720 | **267** |
| 32 | Tamil Nadu | 5,269,600 | 3,251,400 | 2,238,000 | 2,295,000 | 38,362 | 503,518 | **20,233** |
| 33 | Telangana | 2,778,800 | 1,770,000 | 1,241,000 | 1,293,400 | 42,624 | 194,545 | **21,266** |
| 34 | Tripura | 280,921 | 204,280 | 137,432 | 146,987 | 3,799 | 42,120 | **1,354** |
| 35 | Uttar Pradesh | 23,036,800 | 13,435,600 | 9,321,200 | 9,683,600 | 3,619,394 | 9,683,261 | **289,731** |
| 36 | Uttarakhand | 922,600 | 602,600 | 420,000 | 435,200 | 21,639 | 85,579 | **6,132** |
| 37 | West Bengal | 7,220,200 | 4,680,200 | 3,251,800 | 3,364,000 | 480,319 | 1,820,090 | **13,150** |
| | **All-India** | 118,446,400 | 72,346,800 | 49,375,400 | 50,465,800 | 9,693,630 | 31,140,332 | **1,148,760** |

ತರಗತಿವಾರು ಶೇಕಡವಾರು ಡ್ರಾಪ್ ಔಟ್.






**Table.5** Gender wise primary level strength in the Government and Private Schools

| Government School Strength | | |
|---|---|---|
| **Year** | Boys | Girls |
| **2010-11** | 28946 | 28032 |
| **2011-12** | 28405 | 29742 |
| **2012-13** | 32934 | 34048 |
| **2013-14** | 38547 | 39621 |
| **2014-15** | 37155 | 37898 |
| **2015-16** | 38999 | 39747 |
| **2016-17** | 78090 | 85472 |
| **2017-18** | 125939 | 84010 |

**Fig.5**




https://search.app/yUnrNrT6rRV1z6Vz9

# 7. ಪರಿಹಾರೋಪಾಯಗಳು

ನಿರೀಕ್ಷಿತ ಫಲ

- ಮಕ್ಕಳು ಶಾಲೆಯಿಂದ ಹೊರಗುಳಿಯಲು ಮತ್ತು ಬಿಡಲು ಕಾರಣಗಳಿಗೆ ಪರಿಹಾರಗಳನ್ನು ತಿಳಿಯುವರು.
- ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಸರ್ಕಾರದ ವಿವಿಧ ಸೌಲಭ್ಯಗಳನ್ನು ಅರ್ಥೈಸಿಕೊಳ್ಳುವರು.

## ಅ. ಶಾಲೆಯಿಂದ ಹೊರಗುಳಿದ ಮಕ್ಕಳ ಸಮಸ್ಯೆಗೆ ಪರಿಹಾರಗಳು.

### 1 . ಶಿಕ್ಷಣ ಹಕ್ಕು ಕಾಯಿದೆ (R T E)

ಈ ಕಾಯ್ದೆ 6 ರಿಂದ 14 ವರ್ಷವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಾತರಿ ಪಡಿಸುತ್ತದೆ. ಇದು ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ನೆರವು ನೀಡುವ ಮೂಲಕ ಸಾಮರಸ್ಯ ಮೂಡಿಸಿ ತಾರತಮ್ಯವನ್ನು ನಿಷೇಧಿಸುತ್ತದೆ.

### 2. ಸಮಗ್ರ ಶಿಕ್ಷಣ ಕರ್ನಾಟಕ (S S K)

ಶಾಲೆಗಳಿಗೆ ಮೂಲಸೌಕರ್ಯ, ಶಿಕ್ಷಕರ ತರಬೇತಿ ನೇಮಕಾತಿ ಮತ್ತು ಕಲಿಕಾ ಸಾಮಗ್ರಿಗಳನ್ನು ಒದಗಿಸುವ ಮೂಲಕ ಶಾಲೆಯನ್ನು ಆಕರ್ಷಿತಗೊಳಿಸಿ ಮಗುವಿನ ಸಂತಸದಾಯಕ ಕಲಿಕೆಗೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಲು ಎಸ್.ಎಸ್.ಎ ಯೋಜನೆ ಜಾರಿಯಲ್ಲಿದ್ದು ಕಾರ್ಯವನ್ನು ನಿರ್ವಹಿಸುತ್ತಿದೆ.

### 3. ಮಧ್ಯಾಹ್ನದ ಬಿಸಿಯೂಟ ಯೋಜನೆ.

ಶಾಲೆಗಳಲ್ಲಿ ಉಚಿತ ಮಧ್ಯಾಹ್ನದ ಬಿಸಿಯೂಟ ಯೋಜನೆ ಹಾಗೂ ಮಕ್ಕಳ ಪೌಷ್ಠಿಕಾಂಶದ ಸ್ಥಿತಿಯನ್ನು ಕ್ಷೀರಭಾಗ್ಯ ಮತ್ತು ಮೊಟ್ಟೆ ನೀಡುವುದರ ಮೂಲಕ ದಾಖಲಾತಿ ಮತ್ತು ನಿಯಮಿತ ಹಾಜರಾತಿಯನ್ನು ಪ್ರೋತ್ಸಾಹಿಸುತ್ತದೆ.

### 4. ಭೇಟಿ ಬಚಾವೋ ಭೇಟಿ ಪಡಾವೋ (ಬಿಬಿಬಿಪಿ)

ಹೆಣ್ಣು ಮಕ್ಕಳ ಭ್ರೂಣ ಹತ್ಯೆ ತಡೆಗಟ್ಟಿ ಶಿಕ್ಷಣವನ್ನು ಕಡ್ಡಾಯ ಮಾಡುವ ಮೂಲಕ ಪ್ರತಿ ಹೆಣ್ಣು ಮಕ್ಕಳು ರಕ್ಷಣೆ ಹೊಂದಿ ಸ್ವಾವಲಂಭಿಯಾಗಿ ಬದುಕಲು ಈ ಯೋಜನೆ ಉತ್ತೇಜಿಸುತ್ತದೆ.

### 5. ಗುರುತಿಸುವಿಕೆ ಮತ್ತು ಟ್ರ್ಯಾಕಿಂಗ್

ಈ ಯೋಜನೆಯು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಮತ್ತು ಪತ್ತೆ ಹಚ್ಚಲು ಒತ್ತು ನೀಡುತ್ತದೆ. ಈ ಮಕ್ಕಳನ್ನು ಶಾಲೆಯ ಮುಖ್ಯವಾಹಿನಿಗೆ ತರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸೂಕ್ತವಾದ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವುದು ಇದರ ಗುರಿಯಾಗಿದೆ.

### 6 . ವಿಶೇಷ ತರಬೇತಿ

ಸಮಗ್ರ ಶಿಕ್ಷಣ ಅಭಿಯಾನವು ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ದಾಖಲಾಗದಿರುವವರು ಸೇರಿದಂತೆ ಎಲ್ಲಾ ಮಕ್ಕಳಿಗೆ ವಿಶೇಷ ತರಬೇತಿ ಮತ್ತು ತರಗತಿಗಳನ್ನು ನಡೆಸುತ್ತದೆ.

### 7. ಪರ್ಯಾಯ ಶಿಕ್ಷಣ

ಶಾಲೆಯಿಂದ ಹೊರಗುಳಿದ ಮಕ್ಕಳ ಅಗತ್ಯತೆಗಳನ್ನು ಪೂರೈಸಲು ವಸತಿ ಶಾಲೆಗಳು ಮತ್ತು ತೆರೆದ ಶಾಲೆಗಳಂತಹ ಪರ್ಯಾಯ ಶಿಕ್ಷಣ ಕೇಂದ್ರಗಳನ್ನ ಸ್ಥಾಪನೆ ಮಾಡಲಾಗಿದ.

### 8. ಅಂತರ್ಗತ ಶಿಕ್ಷಣ

ಸಮಗ್ರ ಶಿಕ್ಷಣವು ಅಂತರ್ಗತ ಶಿಕ್ಷಣಕ್ಕೆ ಒತ್ತು ನೀಡುತ್ತದೆ ಮತ್ತು ವಿಶೇಷ ಅಗತ್ಯವುಳ್ಳ, ಅನಾನುಕೂಲ ಹಿನ್ನಲೆಯುಳ್ಳ ಮಕ್ಕಳನ್ನು ಬೆಂಬಲಿಸುತ್ತದೆ. ಈ ಮಕ್ಕಳು ಶಿಕ್ಷಣಕ್ಕೆ ಸಮಾನ ಪ್ರವೇಶವನ್ನು ಹೊಂದಿದ್ದಾರೆ ಮತ್ತು ಶಾಲಾ ವ್ಯವಸ್ಥೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದು ಇದರ ಗುರಿಯಾಗಿದೆ.

ಹೆಚ್ಚಿನ ಮಾಹಿತಿಗಾಗಿ

:-https://www.google.com/amp/s/www.jagranjosh.com/articles/amp/list-of-educational-

government-schemes-for-students-teachers-and-schools-1690534298-1

## ಆ. ಶಾಲೆಯಿಂದ ಹೊರಗಿರುವ ಮಕ್ಕಳ ಸವಾಲುಗಳನ್ನು ಎದುರಿಸುವುದು ಹೇಗೆ ?

1. **ಮೂಲ ಸೌಕರ್ಯವನ್ನು ಬಲಪಡಿಸುವುದು**

   ಶಾಲೆಗಳ ವ್ಯಾಪ್ತಿಯನ್ನು ವಿಸ್ತರಿಸುವುದು ಸೌಲಭ್ಯಗಳನ್ನು ಸುಧಾರಿಸುವುದು ಮತ್ತು ಸುರಕ್ಷಿತ ಸಾರಿಗೆ ಆಯ್ಕೆಗಳನ್ನು ಒದಗಿಸುವುದು

2. **ಅಂಚಿನಲ್ಲಿರುವ ಸಮುದಾಯಗಳನ್ನು ಸಬಲೀಕರಣಗೊಳಿಸುವುದು**

   ಸಾಮಾಜಿಕ ಆರ್ಥಿಕ ಅಸಮಾನತೆಗಳನ್ನು ಪರಿಹರಿಸುವುದು ಮತ್ತು ಉದ್ದೇಶಿತ ಮಧ್ಯಸ್ಥಿಕೆಗಳ ಮೂಲಕ ಅಂಚಿನಲ್ಲಿರುವ ಸಮುದಾಯಗಳನ್ನು ಸಬಲೀಕರಣ ಗೊಳಿಸುವುದು


3. **ಶಿಕ್ಷಕರ ತರಬೇತಿ ಮತ್ತು ನೇಮಕಾತಿ**

ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚಿಸುವುದು ಮತ್ತು ಸಾಕಷ್ಟು ನೇಮಕಾತಿ ಮತ್ತು ಅರ್ಹ ಶಿಕ್ಷಕರ ಧಾರಣೆಯನ್ನು ಖಚಿತಪಡಿಸುವುದು

4 **ಅರಿವು ಮತ್ತು ಸಂವೇದನಾಶೀಲತೆ**

ಶಿಕ್ಷಣದ ಪ್ರಾಮುಖ್ಯತೆಯನ್ನು ಉತ್ತೇಜಿಸಲು ಜಾಗೃತಿ ಅಭಿಯಾನಗಳನ್ನು ನಡೆಸುವುದು ಮತ್ತು ಪ್ರವೇಶಕ್ಕೆ ಅಡ್ಡಿಯಾಗುವ ಸಾಮಾಜಿಕ ನಿಯಮಗಳಿಗೆ ಸವಾಲು ಹಾಕುವುದು.

## 4.1 ಶಿಕ್ಷಣ ಸಾರ್ವತ್ರಿಕರಣಕ್ಕಾಗಿ ಆಯೋಜಿಸಿರುವ ಕಾರ್ಯಕ್ರಮಗಳು



## ಅ. ಸಾರ್ವತ್ರಿಕ ದಾಖಲಾತಿ

ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸುವುದೇ "ಸಾರ್ವತ್ರಿಕ ದಾಖಲಾತಿ" ಮಕ್ಕಳ ಗಣತಿ 1961 ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ ಅನ್ವಯ 1963 ರಿಂದಲೂ ಪ್ರತಿ ವರ್ಷ ಮಕ್ಕಳ ಗಣತಿಯನ್ನು ಮಾಡಲಾಗುವುದು. ನವಜಾತ ಶಿಶುವಿನಿಂದ 18 ವರ್ಷದವರೆಗಿನ ಮಕ್ಕಳನ್ನು ಗಣತಿ ಮಾಡಲಾಗುವುದು. ಈ ಸಮೀಕ್ಷೆಯಲ್ಲಿ ಶಾಲಾ ವಯೋಮಾನದ, ಶಾಲೆಬಿಟ್ಟ ಶಾಲೆಯಲ್ಲಿರುವ ಅಂಗವಿಕಲ, ವಲಸೆ, ಕೊಳಚೆ ಪ್ರದೇಶಗಳ ಮಕ್ಕಳ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸಲಾಗುವುದು.

### 1. ದಾಖಲಾತಿ ಆಂದೋಲನ

ಮಕ್ಕಳ ಗಣತಿಯ ಪ್ರಕಾರ ಜೂನ್ ತಿಂಗಳಲ್ಲಿ ಶಾಲೆಗೆ ದಾಖಲು ಮಾಡಿಕೊಳ್ಳಲು ದಾಖಲಾತಿ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು .

### 2. ವಿಶೇಷ ದಾಖಲಾತಿ ಆಂದೋಲನ

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಹಮ್ಮಿಕೊಂಡಿರುವ ಅನೇಕ ಕಾರ್ಯತಂತ್ರಗಳು ನೆರವಾಗುತ್ತಿವೆ. ಈ ಕಾರ್ಯತಂತ್ರಗಳನ್ನು ಹೊರತುಪಡಿಸಿ ಇನ್ನೂ ಅನೇಕ ಕಾರಣಗಳಿಂದ ಮಗು ಶಾಲೆಯಿಂದ ಹೊರಗುಳಿಯುವ ಸಂಭವಗಳು ಇದ್ದು ಇಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವೇ ವಿಶೇಷ ದಾಖಲಾತಿ ಆಂದೋಲನ

### 3. ಬಾ ಮರಳಿ ಶಾಲೆಗೆ

ವಿವಿಧ ಕಾರಣಗಳಿಂದ ಶಾಲೆ ತೊರೆದ ಹಾಗೂ ಅನಿಯಮಿತವಾಗಿ ಗೈರು ಹಾಜರಾಗುತ್ತಿರುವ 6-18 ವರ್ಷದ ಮಕ್ಕಳನ್ನು ಪುನಃ ಶಾಲೆಗೆ ಕರೆತಂದು ಶಿಕ್ಷಣದ ಅವಕಾಶ ಕಲ್ಪಿಸಲು 2002ನೇ ಶೈಕ್ಷಣಿಕ ವರ್ಷದಿಂದ ಬಾ ಮರಳಿ ಶಾಲೆಗೆ ಕಾರ್ಯಕ್ರಮವನ್ನು ಆರಂಭಿಸಲಾಗಿದೆ, ಎಸ್.ಡಿ.ಎಂ.ಸಿ ಸದಸ್ಯರ ಜೊತೆ ಮಕ್ಕಳ ಮನೆಗಳಿಗೆ ಭೇಟಿ ನೀಡಿ ಮುಖ್ಯವಾಹಿನಿಗೆ ಕರೆತರುವ ಕಾರ್ಯಕ್ರಮ ಇದಾಗಿದೆ.

## 4. ಕೂಲಿಯಿಂದ ಶಾಲೆಗೆ

ಶಿಕ್ಷಣ ಮೂಲಭೂತ ಹಕ್ಕು ಎಲ್ಲಾ ಮಕ್ಕಳಿಗೆ ಶಿಕ್ಷಣ ನೀಡುವುದು ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಇಲಾಖೆಯು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಮಕ್ಕಳನ್ನು ಕೂಲಿಯ ಸ್ಥಳಗಳಿಂದ ಬಿಡಿಸಿ ಮುಖ್ಯವಾಹಿನಿಗೆ ಕರೆತರುವ ಕಾರ್ಯಕ್ರಮ ಇದಾಗಿದೆ.

## 5. ಬಾ ಬಾಲೆ ಶಾಲೆಗೆ

ಸಮೀಕ್ಷೆಗಳ ಪ್ರಕಾರ ಶಾಲೆಯಿಂದ ಹೊರಗಿರುವ ಮಕ್ಕಳಲ್ಲಿ ಬಾಲಕರಗಿಂತ ಬಾಲಕಿಯರೇ ಹೆಚ್ಚಾಗಿರುವುದು ದೃಢಪಟ್ಟಿದೆ. ಶಾಲೆಯ ಹೊರಗಿರುವ ಬಾಲಕಿಯರನ್ನು ಶಾಲೆಗೆ ಕರೆತಂದು ಕೆಜಿಬಿವಿ ಮುಂತಾದ ವಸತಿ ಶಾಲೆಗಳಿಗೆ ಸೇರಿಸುವುದು ಇದರ ಕಾರ್ಯತಂತ್ರವಾಗಿದೆ.

## 6. ಸಂಚಾರಿ ಶಾಲೆ

ಸಂಚಾರಿ ಶಾಲೆಯು ಒಂದು ನೂತನ ಮಾದರಿ ಯೋಜನೆಯಾಗಿದೆ. ಈ ಕಾರ್ಯಕ್ರಮವು 1999 ರಿಂದ ಜಾರಿಗೆ ಬಂದಿದೆ. ಶಾಲಾ ಅರ್ಹ ವಯಸ್ಸಿನ ಮಕ್ಕಳ ಹತ್ತಿರ ಶಾಲೆಯೇ ಹೋಗಬಾರದೇಕೆ? ಎಂಬ ಪ್ರಶ್ನೆಗೆ ಉತ್ತರವಾಗಿ ಮಕ್ಕಳಿರುವ ಸ್ಥಳದಲ್ಲಿ ಶಾಲೆ ತೆರೆಯಲು ಅಸಾಧ್ಯವಾದಾಗ ಅಂತಹ ಮಕ್ಕಳಿಗೆ ಶಿಕ್ಷಣ ಕೊಡಲು ಹತ್ತಿರದ ಶಾಲೆಗೆ ಸಾಗಿಸುವ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ ಹಾಗೂ ಸಂಚಾರಿ ಶಾಲೆಯ ಬಸ್ಸಿನಲ್ಲಿ ತರಗತಿ ನಡೆಸಲು ಅನುಕೂಲವಾಗುವಂತೆ ಬಸ್ಸಿನಲ್ಲಿಯೇ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ.

## 7. ಟೆಂಟ್ ಶಾಲೆ

ಜೀವನೋಪಾಯಕ್ಕಾಗಿ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ವಲಸೆ ಹೋಗುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳನ್ನು ಕರೆದೊಯ್ಯುತ್ತಾರೆ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವಲಸೆ ಸಂದರ್ಭದಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವವರ ಸಂಖ್ಯೆ ಮತ್ತು ದೀರ್ಘಗೈರು ಹಾಜರಿ ಹೆಚ್ಚಾಗುತ್ತದೆ. ಈ ಸಮಸ್ಯೆಯನ್ನು ನಿಯಂತ್ರಿಸಲು "**ಎಲ್ಲಿ ವಲಸೆಯೋ ಅಲ್ಲಿ ಶಾಲೆ**" ಎಂಬ ತತ್ವದ ಆಧಾರದ ಮೇಲೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ.

## 8. ಚಿಣ್ಣರ ಅಂಗಳ

ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟ ಮಕ್ಕಳಿಗೆ 60 ದಿನಗಳ "ಸೇತುಬಂಧ" ಕಾರ್ಯಕ್ರಮ ಹಮ್ಮಿಕೊಂಡು ಮೌಲ್ಯಮಾಪನ ಮಾಡಿ ನಂತರ ಅವರವರ ಕಲಿಕಾ ಮಟ್ಟಕ್ಕೆ ತಕ್ಕಂತೆ ವಿವಿಧ ವರ್ಗಗಳಿಗೆ ದಾಖಲಿಸಿ ಮುಖ್ಯವಾಹಿನಿಗೆ ತರುವುದು. ಇದು ವಸತಿಸಹಿತ ಮತ್ತು ವಸತಿರಹಿತ ಎರಡು ರೂಪದಲ್ಲಿರುತ್ತದೆ.

## 9. ಆರು ತಿಂಗಳ ವಸತಿ ರಹಿತ ಸೇತುಬಂಧ

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವ ಪ್ರಯತ್ನದಲ್ಲಿ ಮಗು ತಾನು ಕಲಿತದ್ದನ್ನು ಮರೆತಿದ್ದರೆ ಈಗ ಶಾಲೆಗೆ ಹೋದರೆ ಕಲಿತ ಮಕ್ಕಳೊಂದಿಗೆ ವ್ಯವಹರಿಸಲು ಅಥವಾ ಅವರ ಸಮಾನವಾಗಿ ಕಲಿಯಲು ಹೇಗೆ ಸಾಧ್ಯ ? ಎನ್ನುವ ಕಾರಣಕ್ಕೆ ಶಾಲೆಗೆ ಬರಲು ಮಗು ಹಿಂಜರಿಯುತ್ತದೆ. ಇಂಥಹವರಿಗೆ ಎರಡು ತಿಂಗಳು Bridge Course ಸೂಕ್ತವಾಗದಿದ್ದರೆ ಆರು ತಿಂಗಳ ಶಿಕ್ಷಣ ನೀಡಿದರೆ ಮಗು ತಾನು ಗಳಿಸಿರುವ ಸಾಮರ್ಥ್ಯಗಳನ್ನು ಪುನಃ ಸ್ಮರಿಸಿ ಮುಂದಿನ ಸಾಮರ್ಥ್ಯ ಗಳಿಸಲು ನೆರವಾಗುವ ಕಾರ್ಯತಂತ್ರವಾಗಿದೆ.

10. **ಅಕ್ಷರ ದಾಸೋಹ ಕಾರ್ಯಕ್ರಮ**

ಮಕ್ಕಳ ದಾಖಲಾತಿ ಸಾರ್ವತ್ರಿಕ ಉಳಿಕೆಗಾಗಿ ಶಾಲೆಯ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ ಜಾರಿಯಲ್ಲಿದ್ದು, ಮಕ್ಕಳಿಗೆ ಉತ್ತಮ ಆಹಾರ ನೀಡಿ, ಮಕ್ಕಳ ದಾಖಲಾತಿ ಮತ್ತು ಕಲಿಕೆ ಹೆಚ್ಚಿಸುವುದು ಇದರ ಉದ್ದೇಶವಾಗಿದೆ.

- ಉಚಿತ ಸಮವಸ್ತ್ರ
- ಉಚಿತ ಪಠ್ಯಪುಸ್ತಕ
- ಉಚಿತ ಸೈಕಲ್

ಇನ್ನೂ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.

## ಆ. ಸಾರ್ವತ್ರಿಕ ಉಳಿಕೆ

ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಶಾಲೆಯಲ್ಲಿಯೇ ಉಳಿಯುವಂತೆ ಮಾಡುವುದು ಮಹತ್ವದ ಅಂಶವಾಗಿದೆ. ಆದರೆ ಹಲವಾರು ಮಕ್ಕಳು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕಾರಣಗಳಿಂದಾಗಿ ಮಧ್ಯದಲ್ಲಿ ಶಾಲೆಯನ್ನು ಬಿಡುವುದು ಕಂಡು ಬರುತ್ತದೆ. ಇಂತಹ ಮಕ್ಕಳನ್ನು ಶಾಲೆಯಲ್ಲಿ ಉಳಿಸಿ ಗುಣಾತ್ಮಕ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಸರ್ಕಾರದ ಅನೇಕ ಯೋಜನೆ, ಕಾರ್ಯಕ್ರಮಗಳ ಮೂಲಕ ಮಕ್ಕಳಿಗಾಗಿ ವಿವಿಧ ಸವಲತ್ತುಗಳನ್ನು ನೀಡುತ್ತದೆ.

1. **ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ:**

ಸರ್ಕಾರಿ ಶಾಲೆಯ 1 ರಿಂದ 10 ನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಅನುದಾನಿತ ಶಾಲೆಯಲ್ಲಿ 1 ರಿಂದ 10 ನೇ ತರಗತಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ ನೀಡಲಾಗುತ್ತಿದೆ.

## 2. **ಅಕ್ಷರ ದಾಸೋಹ:**

1 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಯೋಜನೆಯಲ್ಲಿ ಮಧ್ಯಾಹ್ನ ಬಿಸಿಯೂಟ ವ್ಯವಸ್ಥೆ ಮಾಡಲಾಗಿದೆ.

## 3. **ಉಚಿತ ಬ್ಯಾಗ್ ಮತ್ತು ನೋಟ್ ಪುಸ್ತಕ:**

5 ಮತ್ತು 7 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ. ಮತ್ತು ಪ.ಪಂಗಡದ ಮಕ್ಕಳಿಗೆ ಬ್ಯಾಗ್ ಮತ್ತು 5, 6 ಮತ್ತು 7 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ SC/ST ಮಕ್ಕಳಿಗೆ ಉಚಿತ ನೋಟ್ ಪುಸ್ತಕ ನೀಡಲಾಗುತ್ತಿದೆ.

## 4. **ವಿದ್ಯಾರ್ಥಿ ವೇತನ** :

- ❖ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ
- ❖ ಹಿಂದುಳಿದ ಅಲ್ಪ ಸಂಖ್ಯಾತ / ಪ.ಜಾ. ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
- ❖ ಗ್ರಾಮೀಣ ಹೆಣ್ಣು ಮಕ್ಕಳ ಹಾಜರಾತಿ ವಿದ್ಯಾರ್ಥಿವೇತನ

## 5. **ಉಚಿತ ವಿದ್ಯಾರ್ಥಿ ನಿಲಯ**

- ◆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಮತ್ತು ಇತರೆ ಹಿಂದುಳಿದ ವರ್ಗದ ಮಕ್ಕಳಿಗೆ ಉಚಿತ ವಸತಿ ನಿಲಯಗಳ ಸೌಲಭ್ಯ ಹಾಗೂ ವಿಶೇಷ ಬೋಧನಾ ವ್ಯವಸ್ಥೆ ಮಾಡಲಾಗಿದೆ.
- ◆ ವೈದ್ಯಕೀಯ ತಪಾಸಣೆ ಮತ್ತು ಸುವರ್ಣ ಆರೋಗ್ಯ ತಪಾಸಣೆ ಪ್ರತಿ ವರ್ಷವೂ ಆರೋಗ್ಯ ಇಲಾಖೆಯವರ ಸಹಯೋಗದೊಂದಿಗೆ ಒಂದು ತಿಂಗಳು ಸುವರ್ಣ ಆರೋಗ್ಯ ತಪಾಸಣೆಯನ್ನು ಎಲ್ಲಾ ಮಕ್ಕಳಿಗೂ ಮಾಡಲಾಗುತ್ತಿದೆ.

## 6. ಉಚಿತ ಸೈಕಲ್ ವಿತರಣೆ

ನಗರ ಪಾಲಿಕೆ ವ್ಯಾಪ್ತಿಯನ್ನು ಹೊರತುಪಡಿಸಿ ಉಳಿದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ ಮಾಡಲಾಗುತ್ತಿದೆ.

## 7. ಪ್ರತಿಭಾ ಕಾರಂಜಿ

ಪ್ರತಿಭಾ ಕಾರಂಜಿ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ವಿವಿಧ ಸ್ಪರ್ಧೆಗಳ ಮೂಲಕ ಹೊರತರಲಾಗುವುದು (ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರಿಗೆ).

## 8. ಚಿಣ್ಣರ ಕರ್ನಾಟಕ ದರ್ಶನ

ಪ್ರತಿ ವರ್ಷವೂ ಬ್ಲಾಕ್ ಹಂತದಲ್ಲಿ 50 ಮಕ್ಕಳಿಗೆ ಚಿಣ್ಣರ ಕರ್ನಾಟಕ ದರ್ಶನದ ಅವಕಾಶ ಕಲ್ಪಿಸಲಾಗಿದೆ. 7ನೇ ತರಗತಿಯ ಪ.ಜಾ / ಪ.ಪಂಗಡದ ಮಕ್ಕಳಿಗೆ ಪ್ರತಿಭಾ ಕಾರಂಜಿ ಹಾಗೂ ಕ್ರೀಡೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದವರಿಗೆ ಕರ್ನಾಟಕ ದರ್ಶನಕ್ಕೆ ಅವಕಾಶ ನೀಡಲಾಗುತ್ತಿದೆ.

## 9. ವಿಶೇಷ ವಸತಿ ಶಾಲೆಗಳ ವ್ಯವಸ್ಥೆ

ಪ್ರತಿಭಾವಂತ ಮಕ್ಕಳಿಗೆ ನವೋದಯ ವಸತಿ ಶಾಲೆ, ಮೊರಾರ್ಜಿ ವಸತಿ ಶಾಲೆ, ಏಕಲವ್ಯ ವಸತಿ ಶಾಲೆ, ಪ್ರತಿಷ್ಠಿತ ಶಾಲೆಗಳು, ಕುವೆಂಪು ವಸತಿ ಶಾಲೆಗಳನ್ನು ಪ್ರಾರಂಭಿಸಿಲಾಗಿದೆ.

## ಇ. ಸಾರ್ವತ್ರಿಕ ಕಲಿಕೆ

ದಾಖಲಾದ ಎಲ್ಲಾ ಮಕ್ಕಳು ಮುಖ್ಯ ವಾಹಿನಿಯಲ್ಲಿ ಉಳಿದು ಅಪೇಕ್ಷಿತ ಮಟ್ಟದ ಕಲಿಕೆಯಾಗುವಂತೆ ಮಾಡುವುದು. ಈ ಕಲಿಕೆಯಾಗಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇತ್ತೀಚಿಗೆ ಕಲಿಕೆಯನ್ನು ಆಂದೋಲನದ ರೂಪದಲ್ಲಿ ಕೈಗೆತ್ತಿಕೊಳ್ಳಲಾಗಿದೆ

- **ಶಿಕ್ಷಕರ ನೇಮಕ**: ಪಾರದರ್ಶಕ ನೀತಿ ಅನುಸರಿಸಿ ಉತ್ತಮ ಸಾಮರ್ಥ್ಯ ಹೊಂದಿದ ಶಿಕ್ಷಕರ ನೇಮಕ ಮಾಡಲಾಗುತ್ತಿದೆ.
- **ಶಿಕ್ಷಕರ ಸಬಲೀಕರಣ**: ಶಿಕ್ಷಕರಿಗೆ ಸೇವಾ ನಿರತ ತರಬೇತಿಗಳನ್ನು ಹಮ್ಮಿಕೊಂಡು ಅಪೇಕ್ಷಿತ ಸಾಮರ್ಥ್ಯ ಹೊಂದಿದ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ.
- **ಸಾಮರ್ಥ್ಯಾಧಾರಿತ ಪಠ್ಯಪುಸ್ತಕ**: ಮಕ್ಕಳು ಗಳಿಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ಗಮನದಲ್ಲಿರಿಸಿಕೊಂಡು ಪಠ್ಯಪುಸ್ತಗಳನ್ನು ಸಿದ್ಧಪಡಿಸಲಾಗಿದೆ.

## ಈ. ಬೋಧನಾ ವಿಧಾನಗಳು ಮತ್ತು ಶಿಕ್ಷಕರ ತರಬೇತಿಗಳು.

ನವೀನ ಬೋಧನಾ ವಿಧಾನಗಳಾದ ನಲಿ-ಕಲಿ, ಚೈತನ್ಯ, ಮಾದರಿಯ ಬೋಧನಾ ವಿಧಾನ, 5ES, ವಿದ್ಯಾಪ್ರವೇಶ, ಮುಂತಾದ ವಿಧಾನಗಳಿಂದ ಕಲಿಕೆಯನ್ನು ನೀಡಲಾಗುತ್ತಿದೆ. ಹಾಗೆಯೇ ಶಿಕ್ಷಣದಲ್ಲಿ ತಂತ್ರಜ್ಞಾನ ಸಹಪಠ್ಯ ಚಟುವಟಿಕೆಗಳು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಸಾರ್ವತ್ರಿಕ ಕಲಿಕೆಗಾಗಿ ರೂಪಿಸಲಾಗುತ್ತಿದೆ. 6 ರಿಂದ 18 ವರ್ಷದ ಪ್ರತಿಯೊಬ್ಬರಿಗೂ ಶಿಕ್ಷಣದ ಅವಕಾಶ ಒದಗಿಸುವುದನ್ನು ಸಾರ್ವತ್ರಿಕ ಅವಕಾಶಗಳೆನ್ನುತ್ತೇವೆ.

**ಶಿಕ್ಷಣದ ಸಾರ್ವತ್ರಿಕತೆಯಲ್ಲಿ ಈ ಕೆಳಕಂಡ ಅವಕಾಶಗಳಿರುತ್ತವೆ.**

❖ ಪ್ರತಿಶತ ಶೇ 96% ಕ್ಕಿಂತ ಹೆಚ್ಚಿನ ಗ್ರಾಮ / ಜನ ವಸತಿ ಪ್ರದೇಶಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ.

❖ ಎಲ್ಲಾ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ಶಾಲಾ ಕಾಂಪೌಂಡ್, ಆಟದ ಮೈದಾನ ಮತ್ತು ಇತರೆ ಸೌಲಭ್ಯಗಳಿಗೆ ವಿವಿಧ ಯೋಜನೆಯಡಿಯಲ್ಲಿ ಅನುದಾನ ನೀಡಲಾಗುತ್ತಿದೆ.

❖ ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

❖ ಶಾಲಾ ಕಟ್ಟಡದ ಸಮರ್ಪಕ ನಿರ್ವಹಣೆಗೆ ಸುಣ್ಣ ಬಣ್ಣ ಕೈತೋಟ ನಿರ್ವಹಣೆ ಮುಂತಾದ ಕೆಲಸಗಳಿಗೆ ಪ್ರತಿ ಕಿರಿಯ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

❖ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಅನುಕೂಲಕ್ಕಾಗಿ ವಿಶೇಷ ಕೊಠಡಿ ವ್ಯವಸ್ಥೆ ಮತ್ತು ರ್‍ಯಾಂಪ್ ವ್ಯವಸ್ಥೆ ಮಾಡಲಾಗುತ್ತಿದೆ.

# 8. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವ ವಿವಿಧ ಅಧಿಕಾರಿಗಳು / ಭಾಗೀದಾರರು

ನಿರೀಕ್ಷಿತ ಫಲ

- ವಿವಿಧ ಭಾಗೀದಾರರ ಕರ್ತವ್ಯಗಳನ್ನು ಮನಗಾಣುವರು.

❖ ರಾಜ್ಯ ಮಟ್ಟದ ವಿವಿಧ ಹಂತದ ಅಧಿಕಾರಿಗಳು

❖ ಜಿಲ್ಲಾ ಹಂತದ ವಿವಿಧ ಹಂತದ ಅಧಿಕಾರಿಗಳು (DDPI) ಆಡಳಿತ, ಅಭಿವೃದ್ಧಿ ಮತ್ತು ಸಿಬ್ಬಂದಿ)

❖ ತಾಲ್ಲೂಕು ಹಂತದ ಕ್ಷೇತ್ರ ಶಿಕ್ಷಣಾಧಿಕಾರಿಗಳು/ BRC-CO ಮತ್ತು ಕ್ಷೇತ್ರ ಸಿಬ್ಬಂದಿ

❖ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ

❖ ಕಾರ್ಮಿಕ ಇಲಾಖೆ

❖ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ

❖ ಪೋಲೀಸ್ ಇಲಾಖೆ ಮುಂತಾದವು.

## 8.1 ಇಲಾಖೆಯ ಹಾಜರಾತಿ / ಅನುಷ್ಠಾನ ಅಧಿಕಾರಿಗಳು / ಭಾಗೀದಾರರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು.

**ಅನುಷ್ಠಾನಾಧಿಕಾರಿಗಳ ಕರ್ತವ್ಯಗಳು**

- ✓ **ನಿಮ್ಮ ಕಾರ್ಯವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದಿರುವ ಹಾಗೂ ಶಾಲೆ ಬಿಟ್ಟ ಮಕ್ಕಳಿದ್ದಾರೆಯೇ?**
- ✓ **ಇದ್ದಲ್ಲಿ ಕಾರಣಗಳೇನು?**
- ✓ **ಇಲ್ಲದಿದ್ದಲ್ಲಿ ಸಾರ್ವತ್ರಿಕ ದಾಖಲಾತಿ ಸಾಧಿಸಲು ನೀವು ಕೈಗೊಂಡ ಮಾರ್ಗೋಪಾಯಗಳೇನು?**

◆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಶಿಕ್ಷಣ ಸಂಯೋಜಕರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜನ ವಸತಿ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳ ಮಾಹಿತಿ ಸಂಗ್ರಹಿಸಿ ಮಕ್ಕಳ ಗಣತಿ ಮಾಡಿದ ನಂತರ ಶಾಲಾ ವ್ಯಾಪ್ತಿಯಲ್ಲಿನ ಜನ ವಸತಿ ಪ್ರದೇಶಗಳ 0–18 ವರ್ಷ ವಯಸ್ಸಿನ ಎಲ್ಲಾ ಮಕ್ಕಳ ಮಾಹಿತಿಯನ್ನು ಗ್ರಾಮ ಶಿಕ್ಷಣ ವಹಿಗೆ ನಿಗದಿಪಡಿಸಿರುವ ನಮೂನೆಯಲ್ಲಿ ಶಾಲಾ ಮುಖ್ಯ ಶಿಕ್ಷಕರು ನಿರ್ವಹಿಸರುವುದನ್ನು ಖಾತರಿಪಡಿಸಿಕೊಳ್ಳುವುದು.

- ◆ OOSC ಯ ಪೋಷಕರಿಗೆ ಮಕ್ಕಳನ್ನು ಶಾಲೆಗೆ ಸೇರಿಸಲು ಸೂಚನೆ ನೀಡುವುದು.
- ◆ ಒಂದು ಗ್ರಾಮದಲ್ಲಿ ಒಂದೇ ಶಾಲೆಯಿದ್ದಲ್ಲಿ ಆ ಶಾಲೆಯವರೇ 'ಗ್ರಾಮ ಶಿಕ್ಷಣ ವಹಿಯಲ್ಲಿ ಮಾಹಿತಿಯನ್ನು ನಿರ್ವಹಿಸುವುದು.

◆ ಒಂದು ವೇಳೆ ಯಾವುದಾದರೂ ಗ್ರಾಮದಲ್ಲಿ ಖಾಸಗಿ ಶಾಲೆಗಳು ಸೇರಿದಂತೆ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದಲ್ಲಿ ಕೇಂದ್ರ ಶಾಲೆಯಲ್ಲಿ ಆ ಗ್ರಾಮದ ಎಲ್ಲಾ ಶಾಲಾ ಶಿಕ್ಷಣ ವಹಿಗಳ ಮಾಹಿತಿಯನ್ನು ಕ್ರೋಢೀಕರಿಸಿ ಗ್ರಾಮ ಶಿಕ್ಷಣ ವಹಿಯನ್ನು (VER) ನಿರ್ವಹಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

◆ ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 9(ಡಿ) ಮತ್ತು ಶಿಕ್ಷಣ ಹಕ್ಕು ನಿಯಮಗಳು 2012ರ ನಿಯಮ 6 ರಲ್ಲಿ ಸೂಚಿಸಿರುವಂತೆ ಅವರ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಗ್ರಾಮ ಶಿಕ್ಷಣ ವಹಿಯಲ್ಲಿ ನಮೂದಿಸಿರುವ ವಯಸ್ಸಿನ ಎಲ್ಲಾ ಮಕ್ಕಳ ಮಾಹಿತಿಯನ್ನು ಕ್ರೋಢೀಕರಿಸಿ ಸ್ಥಳೀಯ ಪ್ರಾಧಿಕಾರವಾದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.

◆ ನಗರ ಪ್ರದೇಶಗಳಲ್ಲಿ ವಾರ್ಡ್ ಶಿಕ್ಷಣ ವಹಿ (WER) ನಿರ್ವಹಿಸಿ ವಾರ್ಡ್ ಮಟ್ಟದಲ್ಲಿ ಮಕ್ಕಳ ಮಾಹಿತಿಯನ್ನು ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.

◆ ಗ್ರಾಮ ಶಿಕ್ಷಣ ವಹಿ ಮತ್ತು ವಾರ್ಡ್ ಶಿಕ್ಷಣ ವಹಿಗಳ ಮಾಹಿತಿಯನ್ನು ಮೂರು ತಿಂಗಳಿಗೊಮ್ಮೆ ಪರಿಷ್ಕರಿಸುವುದು.

◆ CRC ಹಂತದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ವೀಕ್ಷಣಾ ವಹಿಯನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸುವುದು.

◆ ಗೈರು ಹಾಜರಿಯ ಅವಧಿಯನ್ನು 7 ದಿನಗಳಿಗೆ ಮಿತಗೊಳಿಸಿ ಸರ್ಕಾರ ಆದೇಶ ಹೊರಡಿಸಿರುವ ಬಗ್ಗೆ SDMC ಸದಸ್ಯರು, ಪೋಷಕರು, ಗ್ರಾಮ ಪಂಚಾಯಿತಿ ಸದಸ್ಯರು, ಸ್ಥಳೀಯ ಶಿಕ್ಷಣಾಸಕ್ತರು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ ನೀಡಿ ಅರಿವು ಮೂಡಿಸುವುದು ಮತ್ತು ಈ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು.

◆ CRC ವ್ಯಾಪ್ತಿಯ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರ ಸಭೆ ಕರೆದು ಯಾವುದೆ ಮಗು ಶಾಲೆಯಿಂದ ಹೊರಗುಳಿಯದಂತೆ ಕ್ರಮ ತೆಗೆದುಕೊಳ್ಳಲು ಹಾಗೂ ಯಾವುದಾದರೂ ಮಗು ಅನುಮತಿಯಲ್ಲಿದೆ 7 ದಿನಗಳ ನಿರಂತರ ಗೈರು ಹಾಜರಾದಲ್ಲಿ ಸಂಬಂಧಿಸಿದ ಶಿಕ್ಷಣ ಸಂಯೋಜಕರಿಗೆ 3 ದಿನಗಳೊಳಗೆ ನಗದಿತ ನಮೂನೆಯಲ್ಲಿ ವರದಿ ಸಲ್ಲಿಸಲು ತಿಳುವಳಿಕೆ ನೀಡುವುದು. ನಿಯಮ 6ಬಿ (1)

◆ ಮುಖ್ಯ ಶಿಕ್ಷಕರು / ತರಗತಿ ಶಿಕ್ಷಕರು, ಮೀನಾ ತಂಡ / ಸ್ಥಳೀಯ ಮುಖಂಡರು/ ಆಶಾ ಕಾರ್ಯಕರ್ತೆಯರ ಜೊತೆಗೆ ಸಂಬಂಧಿಸಿದ ಪೋಷಕರನ್ನು ಭೇಟಿ ಮಾಡಿ ಮಗುವಿನ ಗೈರು ಹಾಜರಿಗೆ ನಿಜವಾದ ಕಾರಣ ತಿಳಿದುಕೊಂಡು ಪೋಷಕರಿಗೆ ತಿಳುವಳಿಕೆ ನೀಡಿ ಮಗು ಶಾಲೆಗೆ ಮರಳಿ ಬರುವಂತೆ ಪೋಷಕರ- ಮನವೊಲಸಿರುವುದನ್ನು ಹಾಜರಾತಿ ಅಧಿಕಾರಿ ಖಾತ್ರಿಪಡಿಸಿಕೊಳ್ಳುವುದು. ತದನಂತರ ಮಗು ಶಾಲೆಗೆ ಹಾಜರಾಗದಿದ್ದಲ್ಲಿ ಹಾಜರಾತಿ ಅಧಿಕಾರಿಗಳಾದ ಶಿಕ್ಷಣ ಸಂಯೋಜಕರು ಸಂಬಂಧಿಸಿದ ಪೋಷಕರನ್ನು ಭೇಟಿ ಮಾಡಿ ಮಗುವಿನ ಗೈರು ಹಾಜರಿಗೆ ನಿಖರ ಕಾರಣ ಪತ್ತೆ ಹಚ್ಚಿ ಮಗು ಮತ್ತು ಪೋಷಕರಿಗೆ ಸೂಕ್ತ ಮಾರ್ಗದರ್ಶನ ನೀಡಿ ಪೋಷಕರಿಗೆ ಮಗುವಿನ ಹಾಜರಾತಿಗಾಗಿ

ನೋಟೀಸ್ ನೀಡಿ ನಿಯಮ 6B(2) ರಂತೆ ನಿಗದಿತ ನಮೂನೆಯಲ್ಲಿ ಸ್ವೀಕೃತಿ ಪಡೆಯುವುದು.

- ಈ ಎಲ್ಲಾ ಪ್ರಕ್ರಿಯೆಗಳು ಮುಗಿದ ನಂತರ ಮಗು ಶಾಲೆಗೆ ಬಾರದಿದ್ದಲ್ಲಿ ಮಗುವಿನೊಂದಿಗೆ ಪೋಷಕರು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ನಿಗದಿತ ದಿನಾಂಕದಂದು ಹಾಜರಾಗಲು ಆದೇಶ ಹೊರಡಿಸುವುದು ನಿಯಮ 6 D(2)
- ಹಾಜರಾತಿ ಆದೇಶ ಹೊರಡಿಸಿದ ನಂತರ ಸದರಿ ಪೋಷಕರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರಾದ ಬಗ್ಗೆ ಅನುಪಾಲನಾ ಕ್ರಮ ತೆಗೆದುಕೊಳ್ಳುವುದು.
- ಒಂದು ವೇಳೆ ಪೋಷಕರು ಹಾಜರಾಗದಿದ್ದಲ್ಲಿ ಬಾಲನ್ಯಾಯಾಲಯ ಕಾಯ್ದೆ ಪ್ರಕಾರ ಪೋಲೀಸರ ಸಹಕಾರ ಪಡೆದು ಮಗುವಿನೊಂದಿಗೆ ಸಂಬಂಧಿಸಿದ ಪೋಷಕರು " ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ" ಮುಂದೆ ಹಾಜರಾಗುವಂತೆ ಕ್ರಮ ತೆಗೆದುಕೊಳ್ಳುವುದು.
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ನಿಗದಿತ ದಿನಾಂಕದಂದು ಹಾಜರಾತಿ ಅಧಿಕಾರಿ ಹಾಜರಾಗಿ ಪ್ರಕರಣದ ಪೂರ್ಣ ವಿವರ ನೀಡುವುದು.
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನೀಡಿದ ಆದೇಶದಂತೆ ಸದರಿ ಮಗುವನ್ನು ವಶಕ್ಕೆ ಪಡದು ಯಾವುದಾದರೂ ಸರ್ಕಾರಿ / ಅನುದಾನಿತ ವಿದ್ಯಾರ್ಥಿ ನಿಲಯ / ಕೆ.ಜಿ.ಬಿವಿ.ಗಳ ವಸತಿ ಶಾಲೆಯಲ್ಲಿ ಮಗುವನ್ನು ದಾಖಲು ಮಾಡಿ ಮಗುವಿನ ನಿಯಮಿತ ಹಾಜರಾತಿಯನ್ನು ಖಾತ್ರಿ ಪಡಿಸುವುದು.

**ಗುಂಪು ಚಟುವಟಿಕೆ**

ಶಾಲೆಯಿಂದ ಹೊರಗುಳಿದ ಮತ್ತು ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ವಿವಿಧ ಭಾಗೀದಾರರ ಪಾತ್ರಗಳೇನು?

ಪೋಷಕರು-

ಶಿಕ್ಷಕರು -

ಎಸ್.ಡಿ.ಎಂ.ಸಿ ಸಮಿತಿ -

ಜನ ಪ್ರತಿನಿಧಿಗಳು -

ಸ್ಥಳೀಯ ಆಡಳಿತ -

ವಿವಿಧ ಹಂತದ ಅನುಷ್ಠಾನ ಅಧಿಕಾರಿಗಳು-

# ◆ 9. ತರಬೇತಿ ಪ್ರಕ್ರಿಯೆಯ ಪುನರಾವಲೋಕನ

**ನಿರೀಕ್ಷಿತ ಫಲ**

- **ಯಶೋಗಾಥೆಗಳನ್ನು ಹಂಚಿಕೊಳ್ಳುವರು.**

## ಗುಂಪು ಚಟುವಟಿಕೆ

ಸಾರ್ವತ್ರಿಕ ದಾಖಲಾತಿಯನ್ನು ಸಾಧಿಸಲಾಗಿದೆ ಎಂದು ಭಾವಿಸೋಣ ಹೀಗೆ ದಾಖಲಾದ ಮಕ್ಕಳು ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡು 18 ವಯಸ್ಸಿನವರೆಗೆ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣವನ್ನು ಪಡೆಯಲು ವಿವಿಧ ಭಾಗೀದಾರರು ಕೈಗೊಳ್ಳಬೇಕಾದ ಕ್ರಮಗಳು ಯಾವುವು ?

- ಕಲಿಕಾ ಸ್ನೆಹಿ ವಾತಾವರಣವನ್ನು ಎಲ್ಲಾ ಮಕ್ಕಳಿಗೆ ಆಸಕ್ತಿದಾಯಕವಾಗಿಸಲು ಶಿಕ್ಷಕರು ಕೈಗೊಳ್ಳಬೇಕಾದ ಕ್ರಮಗಳು ಯಾವುವು?
- ತರಗತಿಯಲ್ಲಿ ಪಡೆದ ಜ್ಞಾನ ಹೊರಗೂ ಅನ್ವಯವಾಗಬೇಕು ಮತ್ತು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಇರಬೇಕು ಹೇಗೆ?
- ಸಾಮರ್ಥ್ಯ / ಕಲಿಕಾಫಲ ಆಧಾರಿತ ಕಲಿಕಾ ಪ್ರಕ್ರಿಯೆಗಳನ್ನು ಹೇಗೆ ಆಯೋಜಿಸುವುದು.
- ಕಲಿಕಾ ಪ್ರಕ್ರಿಯೆಯನ್ನು ತರಗತಿಯ ಹೊರಗೂ ವಿಸ್ತರಿಸಲು ಸೂಕ್ತವಾದ ನಿರ್ದಿಷ್ಟ ಕಾಲಾವಧಿಯ ಪ್ರಾಜೆಕ್ಟ್‌ಗಳನ್ನು ನೀಡುವುದು.
- ತರಗತಿ ಪ್ರಕ್ರಿಯೆಗಳಲ್ಲಿ ಜ್ಞಾನವನ್ನು ಕಟ್ಟಿಕೊಳ್ಳುವ ಅಂಶಗಳಿಗೆ ಹೆಚ್ಚಿನ ಹೊತ್ತು ನೀಡುವುದು.
- ಕಲಿಕಾ ಅನುಭವಗಳನ್ನು ವೈವಿಧ್ಯಮಯವಾಗಿ ಕ್ಷೇತ್ರ ಭೇಟಿ, ಪರಿಸರ ಅಧ್ಯಯನ ಪ್ರಾತ್ಯಕ್ಷಿಕೆಗಳು, ಉಪನ್ಯಾಸಗಳು ಮತ್ತು ಪ್ರದರ್ಶನ ಪಾಠಗಳು ನಿರ್ವಹಿಸುವುದು.
- ಕಲಿಕೆಯ ಹಾಗೂ ಕಲಿಕಾ ಅನ್ವಯದಲ್ಲಿ ನಿರಂತರತೆಯನ್ನು ಕಾಪಾಡಿಕೊಳ್ಳುವುದು.

# 9.1 ಯಶೋಗಾಥೆಗಳು

1. 9ನೇತರಗತಿ ಶಾಲೆ ಬಿಟ್ಟ ಮಗು ಮರಳಿ ಶಾಲೆಗೆ ಬಂದು ಐಪಿಎಸ್ ಪರೀಕ್ಷೆ ಉತ್ತೀರ್ಣರಾಗಿ ಸಾಧನೆ ಮಾಡಿದ ಸಾಧಕಿ. ತಮಿಳುನಾಡಿನ ದಿಂಡಿಗಲ್ ನಲ್ಲಿ ಅಂಬಿಕಾ ಎಂಬ ಹೆಣ್ಣು ಮಗಳನ್ನು ಓದಿಸಿ ಫಲವೇನು ? ಎಂದು ಶಾಲೆ ಬಿಡಿಸಿ ಕೆಲವು ವರ್ಷಗಳ ನಂತರ ಪೊಲೀಸ್ ಪೇದೆಗೆ ಮದುವೆ ಮಾಡಿಕೊಡಲಾಗುತ್ತದೆ.

ಅಂಬಿಕಾಳು ಒಂದು ದಿನ ತನ್ನ ಪತಿ ಕೆಲಸ ಮಾಡುವ ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ಠಾಣೆಯ ಪಿ.ಎಸ್.ಐ ನೀಡುತ್ತಿದ್ದ ಖಡಕ್ ಆದೇಶ ಮತ್ತು ದರ್ಪಗಳನ್ನು ನೋಡಿದಳು ಪತಿ ಮನೆಗೆ ಬಂದ ಮೇಲೆ ನೀವು ಪಿ.ಎಸ್.ಐ ಆಗಲು ಸಾಧ್ಯವಿಲ್ಲವೇ ? ಎಂದು ಪ್ರಶ್ನಿಸಿದರು. ಪತಿ ಅದಕ್ಕೆ ಪದವಿ ಪಡೆಯಬೇಕು, ಪಿ.ಎಸ್.ಐ ಸ್ಪರ್ಧಾತ್ಮಕ ಪರೀಕ್ಷೆ ಪಾಸ್ ಮಾಡಬೇಕು ಅದೆಲ್ಲಾ ನಮಗ್ಯಾಕೆ ಬಿಡಿ ಎಂದು ಸುಮ್ಮನೆ ಇರಲು ತಿಳಿಸಿ. ನಮ್ಮನ್ನು ಪಿ.ಎಸ್.ಐ ನಿಯಂತ್ರಿಸುತ್ತಾನೆ, ಪಿ.ಎಸ್.ಐ ರವರನ್ನು ಎಸ್ಪಿಗಳು ನಿಯಂತ್ರಿಸುತ್ತಾರೆ. ಎಸ್.ಪಿ. ಆಗಲು ಏನು ಓದಬೇಕು ಎಂದು ಪ್ರಶ್ನಿಸಿದರು. ಅದಕ್ಕೆ ಪತಿ ಅದೆಲ್ಲ ನಿನಗ್ಯಾಕೆ ಸುಮ್ಮನಿರು ಎಂದು ಗದರಿಸಿದ, ಇಲ್ಲ ತಿಳಿಸಬೇಕು ಎಂದು ಹಠಕ್ಕೆ ಬೀಳುತ್ತಾಳೆ. ಪತಿ ಕೋಪದಿಂದ ಐ.ಪಿ.ಎಸ್ ಪಾಸ್ ಮಾಡಬೇಕು ಆಗ ಎಸ್ಪಿಯಾಗಲು ಸಾಧ್ಯ ಎಂದು ತಿಳಿಸಿದ. ಅಂಬಿಕ ನಾನು ಓದಲು ನೀವು ಅವಕಾಶ ಮಾಡಿ ಕೊಡಿ ನಾನು ಐ.ಪಿ.ಎಸ್. ಪಾಸ್ ಮಾಡಿ ಸಾಧಿಸಿ ತೋರಿಸುತ್ತೇನೆ. ಪೋಲಿಸ್ ಇಲಾಖೆಯ ಉನ್ನತ ಹುದ್ದೆಯನ್ನು ಅಲಂಕರಿಸುತ್ತೇನೆ, ಎಂದು ದೃಢ ನಿರ್ಧಾರವನ್ನು ವ್ಯಕ್ತಪಡಿಸಿ ಶಾಲೆಗೆ ಮರಳಿ ಸೇರಿ ಪದವಿಯನ್ನು ಪಡೆದು ಐ.ಪಿ.ಎಸ್ ಪರೀಕ್ಷೆ ಪಾಸ್ ಮಾಡಿ ಎಸ್.ಪಿ ಹುದ್ದೆಯನ್ನು ಅಲಂಕರಿಸುತ್ತಾರೆ.

ಹೆಚ್ಚಿನ ಮಾಹಿತಿಗಾಗಿ https://images.app.goo.gl/fDTLcci8rUb4XqkM7

2. 2024 -25ನೇ ಸಾಲಿನ ಒಂದನೇ ತರಗತಿಗೆ ಸಿನ್ನೆರಿ, ಸೀತಮ್ಮ. ದೇವೆರಿ, ಬಾಹುಬಲಿ ಈ ನಾಲ್ಕು_ ಮಕ್ಕಳ ಪೋಷಕರ ಮನವಲಿಸಿ, ಕೋಲಾರ ಜಿಲ್ಲೆ, ಮುಳಬಾಗಿಲು, ತಾಲ್ಲೂಕಿನ, GHPS ಅಗರ _ಶಾಲೆಗೆ ದಾಖಲು ಮಾಡಿಕೊಳ್ಳಲಾಯಿತು, ಒಟ್ಟು ದಾಖಲಾದ 30 ಮಕ್ಕಳನ್ನು ಕಾಡಿನಿಂದ ಶಾಲೆಗೆ ಕರೆತಂದ ಕ್ಷಣಗಳು...



## 3.2 ವಿವರಣಾತ್ಮಕ ಅಂಶಗಳು.

- ❖ ಮಾನವ ಸಂಪನ್ಮೂಲದ ಶ್ರೀಮಂತಿಕೆಯು ಆಧಾರವಾಗಿರುವುದು ಮಗುವಿನ ಶಿಕ್ಷಣದಲ್ಲಿ ಎಂಬ ಅಂಶವನ್ನು ನಾವು-ನೀವೆಲ್ಲಾ ಚಿಂತಿಸಬೇಕಾಗಿದೆ.
- ❖ ಪ್ರತಿ ಗ್ರಾಮ ಪಂಚಾಯಿತಿ ಹಂತದಲ್ಲಿ ಒಬ್ಬ ಜವಾಬ್ದಾರಿಯುತ ಅಧಿಕಾರಿಯು ಶಾಲಾ ಬಿಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಪತ್ತೆ ಹಚ್ಚುವುದು ಹಾಗೂ ನಿಗಾವಹಿಸುವುದು.
- ❖ ಮಕ್ಕಳ ಕಲ್ಯಾಣ ಮತ್ತು ಅಭಿವೃದ್ಧಿ ಇಲಾಖಾ ವತಿಯಿಂದ ಮಗುವಿನ ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ಪ್ರತಿ ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸುವುದು.

- ಸರ್ಕಾರಿ ಶಾಲೆಯಲ್ಲಿ ಸಿಗುವ ಸವಲತ್ತುಗಳ ಬಗ್ಗೆ ತಿಳಿಸಿ ಉಚಿತ ಶಿಕ್ಷಣದ ಬಗ್ಗೆ ಪ್ರಚಾರ ಮಾಡುವುದು
- ಎಲ್ಲಾ ಶೈಕ್ಷಣಿಕ ಅನುಷ್ಠಾನಾಧಿಕಾರಿಗಳಿಗೆ ಹೆಚ್ಚಿನ ಮಹತ್ವ ತಿಳಿಸುವ ತರಬೇತಿಗಳನ್ನು ನೀಡುವುದು
- SDMC ಸದಸ್ಯರಿಗೆ ಮತ್ತು ಪೋಷಕರಿಗೆ OOSC ಮಕ್ಕಳ ಬಗ್ಗೆ ಉಂಟಾಗುವ ಸಮಸ್ಯೆಗಳ ಬಗ್ಗೆ ಅರಿವು-ಜ್ಞಾನ ಮೂಡಿಸುವುದು.
- ಶಾಲೆ ಬಿಟ್ಟ ಮಕ್ಕಳು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಮಸ್ಯೆಯನ್ನು ನಿವಾರಿಸಲು ಶಾಶ್ವತ ಮಾರ್ಗೋಪಾಯಗಳನ್ನು ತಿಳಿಸುವುದು
- ಶಾಲೆ ಬಿಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳು ಹೆಚ್ಚಾಗಿ ಕಂಡು ಬರುವ ಸ್ಥಳ ಮತ್ತು ಜನವಸತಿ ಪ್ರದೇಶಗಳನ್ನು ಗುರುತಿಸಿ ಪಟ್ಟಿ ಮಾಡಿ ಜಾಡು ಹಿಡಿದು ಸದಾ ನಿಗಾ ವಹಿಸಲು ಇತರೆ ಇಲಾಖೆಗಳನ್ನು ಸಮ್ಮಿಳಿತಗೊಳಿಸುವುದು.
- ಶಾಲೆ ಬಿಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಮಸ್ಯೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಖ್ಯ ಶಿಕ್ಷಕರು BRC, CO, ECO, BRP, CRP, ಶಿಕ್ಷಕರು, ಮುಂತಾದ ಇಲಾಖಾ ಅನುಷ್ಠಾನಾಧಿಕಾರಿಗಳು ಜವಾಬ್ದಾರಿಯಿಂದ ಭಾಗವಹಿಸುವುದು
- ಸಮುದಾಯ, ಪೋಷಕರು ಶಿಕ್ಷಕರು ಎಲ್ಲಾ ಇಲಾಖೆಯ ಅನುಷ್ಠಾನಾಧಿಕಾರಿಗಳು ಒಗ್ಗೂಡಿ ಕೆಲಸ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ

## 9.3 ಸಮೀಕ್ಷೆಯ ಮೌಲ್ಯಮಾಪನದ ಪ್ರಶ್ನೆಗಳು

- ಮಕ್ಕಳು ಶಾಲೆ ಬಿಡಲು/ಶಾಲೆಗೆ ಸೇರದಿರಲು ಕಾರಣವೇನು ?
- ಬಡತನದ ಸಮಸ್ಯೆಯೆ ?
- ದೈಹಿಕ ಅಥವಾ ಮಾನಸಿಕ ನ್ಯೂನ್ಯತೆಯೆ ?
- ಓದಲು ಆಸಕ್ತಿ ಇಲ್ಲವೇ ?
- ಪೋಷಕರ ಹಿನ್ನೆಲೆ ಏನು ? (ಅನಾಥ/ಅವಿಭಕ್ತ ಕುಟುಂಬ)
- ಬಾಲ್ಯದಲ್ಲಾದ ದೈಹಿಕ ಮತ್ತು ಮಾನಸಿಕ ಆಘಾತಗಳೇನು ?
- ಕೌಟುಂಬಿಕ ಜವಾಬ್ದಾರಿಗಳೇನು ?
- ವಸತಿ ಪ್ರದೇಶದಿಂದ ಶಾಲೆಯು ದೂರದಲ್ಲಿದೆಯೇ ?
- ವಲಸೆಗೆ ಕಾರಣಗಳೇನು ?
- ಸ್ಥಳೀಯ ಭಾಷೆ ಅರ್ಥವಾಗದಿರಲು ಕಾರಣವೇನು ?
- ಶಾಲೆ ಆಕರ್ಷಿತವಾಗದಿರಲು ಕಾರಣವೇನು ?
- ತಂದೆ-ತಾಯಿ ವಿಚ್ಛೇದನ ಪಡೆದಿರುವರೇ ?

# 10. ಉಪ ಸಂಹಾರ

ಭಾರತದಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಸಮಸ್ಯೆಯು ಶಿಕ್ಷಣ ವ್ಯವಸ್ಥೆಗೆ ಗಮನಾರ್ಹ ಸವಾಲನ್ನು ಒಡ್ಡುತ್ತಲೇ ಇದೆ. ಶಿಕ್ಷಣವನ್ನು ಸಾರ್ವತ್ರಿಕರಣ ಗೊಳಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಸವಾಲಾಗಿರುವ ಶಾಲೆ ಬಿಟ್ಟ ಮಕ್ಕಳು ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಕುರಿತಾಗಿ ಅವರ ಸಮಸ್ಯೆಗಳು, ಪರಿಹಾರಗಳು ಹಾಗೂ ಎಲ್ಲಾ ಭಾಗೀದಾರರ ಪಾತ್ರವನ್ನು ಈ ಸಂಚಿಕೆಯಲ್ಲಿ ಸವಿವರವಾಗಿ ಚರ್ಚಿಸಲಾಗಿದೆ. 1993 ರಿಂದಲೂ ಶಿಕ್ಷಣ ಸಾರ್ವತ್ರೀಕರಣಕ್ಕೆ ನಡೆಸುತ್ತಿರುವ ಪ್ರಯತ್ನ ಇಂದಿಗೂ ಮುಂದುವರಿಯುತ್ತಲೇ ಇದೆ. ಮಗುವಿನ ಸರ್ವತೋಮುಖ ಬೆಳವಣಿಗೆ ಹಾಗೂ ದೇಶದ ಪ್ರಗತಿಗೆ ಶಿಕ್ಷಣ ಭದ್ರ ಬುನಾದಿಯಾಗಬೇಕಾದರೆ, ಜನಿಸಿದ ಪ್ರತಿಯೊಂದು ಮಗುವೂ ಶಿಕ್ಷಣವನ್ನು ಪಡೆಯುವುದು ಕಡ್ಡಾಯವಾಗಬೇಕಿದೆ. ಈ ನಿಟ್ಟಿನಲ್ಲಿ ಪೋಷಕರಾದಿಯಾಗಿ ಎಲ್ಲರೂ ಜವಾಬ್ದಾರಿಯುತವಾಗಿ ಕಾರ್ಯಪ್ರವೃತ್ತರಾದಾಗ ಮಾತ್ರ ಈ ಸಮಸ್ಯೆ ಪರಿಹಾರಗೊಂಡು ನಮ್ಮೆಲ್ಲರ ಪ್ರಯತ್ನ ಯಶಸ್ಸನ್ನು ಕಾಣುತ್ತದೆ.

ಶಾಲೆ ಬಿಟ್ಟ ಮಕ್ಕಳು ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಂಡು ಪರಿಹಾರ ಮಾಡುವ ಪ್ರಯತ್ನ ನಡೆಯುತ್ತಿದ್ದರೂ, ಪ್ರತಿಬಾರಿ ವಿನೂತನ ರೀತಿಯಲ್ಲಿ ಸಮಸ್ಯೆಗಳು ಎದುರಾಗುತ್ತಲೇ ಇವೆ. ಪರಿಸ್ಥಿತಿ ಹೀಗಿರುವಾಗ, ಪ್ರತಿಯೊಬ್ಬ ಭಾಗೀದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳನ್ನು ತಾವೇ ಸ್ವಯಂ ಪರಿಹರಿಸಿಕೊಳ್ಳಲು ಶಕ್ತರಾಗಬೇಕು. ಹೀಗೆ ಮರಳಿ ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ವಿಷಯದಲ್ಲಿ ಶಿಕ್ಷಕರು ಸಹಾನುಭೂತಿ ಹೊಂದಿದ್ದು ಅವರ ಕಡೆಗೆ ವಿಶೇಷ ಗಮನಹರಿಸಿ ದಾಖಲಾದ ಪ್ರತಿ  ಮಗುವೂ ಶಾಲೆಯಲ್ಲಿ ಉಳಿಯಲು ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ಮಗುವಿನ ಸರ್ವಾಂಗೀಣ ಅಭಿವೃದ್ಧಿ ಹಾಗೂ ಸರ್ಕಾರದ ಪ್ರಮುಖ ಗುರಿಯಾದ ಶಿಕ್ಷಣ ಸಾರ್ವತ್ರೀಕರಣದ ಆಶಯ ನೆರವೇರುತ್ತದೆ ಎಂಬ ನಿರೀಕ್ಷೆಯೊಂದಿಗೆ ಈ ಸಂಚಿಕೆಯನ್ನು ರೂಪಿಸಲಾಗಿದೆ. ಇದರ ಸದುಪಯೋಗವನ್ನು ಎಲ್ಲಾ ಭಾಗೀದಾರರು ಪಡೆದು ಪ್ರತಿಯೊಂದು ಮಗುವಿನ ಉಜ್ವಲ ಭವಿಷ್ಯಕ್ಕಾಗಿ, ದೇಶದ ಪ್ರಗತಿಗಾಗಿ ಕೈ ಜೋಡಿಸಿ ಸಹಕರಿಸುವ ಹಾದಿಯಲ್ಲಿ ನಾವೆಲ್ಲ ಸಾಗೋಣ______..

# 11. ಆಕರಗಳು

1. DSERT/ NCERT Website
2. **ಶೋಧ ಸಾಹಿತ್ಯ**
3. Google
4. Shagun portal MHRD
5. YOU TUBE

## 12. ತರಬೇತಿಯ ವೇಳಾ ಪಟ್ಟಿ.

| ಸಮಯ → | 10 ರಿಂದ 10:30 | 10:30 ರಿಂದ 11:45 | 11:45 ರಿಂದ 12.00 | 12 ರಿಂದ 1.15 | 1.15 ರಿಂದ 2.15 | 2.15 ರಿಂದ 3.30 | 3.30 ರಿಂದ 3.45 | 3.45 ರಿಂದ 4.00 |
|---|---|---|---|---|---|---|---|---|
| ದಿನ ↓ | – | ಅಧಿವೇಶನ–1 | – | ಅಧಿವೇಶನ–2 | | ಅಧಿವೇಶನ–3 | | ಅಧಿವೇಶನ–4 |
| 01 | ನೋಂದಣಿ & ಪೂರ್ವ ಪರೀಕ್ಷೆ | ಮಾಡ್ಯೂಲ್ ಪರಿಚಯ ತರಬೇತಿ ಅವಶ್ಯಕತೆ. | ಟೀ ಬ್ರೇಕ್ | ಪರಿಕಲ್ಪನಾ ಟಿಪ್ಪಣಿ | ಊಟದ ಸಮಯ | ವ್ಯಾಪ್ತಿ ಮತ್ತು ಹಿನ್ನೆಲೆ | ಟೀ ಬ್ರೇಕ್ | ಉದ್ದೇಶ & ವ್ಯಾಖ್ಯಾನಗಳು |
| 02 | ವರದಿ & ಚಿಂತನೆ | ಹಿಮ್ಮಾಹಿತಿ | | ಕಾರಣಗಳು | | ಪರಿಣಾಮಗಳು | | ಸವಾಲುಗಳು |
| 03 | ವರದಿ & ಚಿಂತನೆ | ಭಾಗೀದಾರರ ಜವಾಬ್ದಾರಿಗಳು | | ಯಶೋಗಾಥೆ. | | ಯಶೋಗಾಥೆ & ಹಂಚಿಕೆ | | ಸಾಫಲ್ಯ ಪರೀಕ್ಷೆ & ಉಪಸಂಹಾರ |

## ಮರಳಿ ಬಾ ಮಗುವೇ . . .

ಓದು ಬರಹ ಕಲಿಯಬೇಕಣ್ಣ
ಓದು ಬರಹ ಕಲಿಯಬೇಕಣ್ಣ
ನಮ್ಮಣ್ಣ ನೀನು ನಮ್ಮಕ್ಕ ನೀನು
ಬುದ್ಧಿವಂತ ನಾಗಬೇಕಣ್ಣ!!

ವಿದ್ಯೆ ಬರದೇ ಇದ್ರೆ ನಿನ್ನ
ದಡ್ಡನಂತ ಹೇಳುತ್ತಾರೆ
ಬುದ್ಧಿವಂತ ನಾದರೆ ನೀನು ಬಿದ್ದು ಬಿದ್ದು ಓಡುತ್ತಾರೆ!!

ಅಂಚೆ ಯಣ್ಣ ಬರುತ್ತಾನೆ
ನಿನಗೆ ಪತ್ರ ನೀಡುತ್ತಾನೆ
ನಿನಗೆ ಓದಲು ಬರದೇ ಇದ್ರೆ ಅವನೇ ಓದಿಕೊಳ್ಳುತ್ತಾನೆ!!

ಬ್ಯಾಂಕಿಗಂತ ಹೋಗುತ್ತೀಯಾ
ಚೆಕ್ಕಿಗೆ ಹೆಬ್ಬೆಟ್ಟು ಒತ್ತುತ್ತೀಯಾ
ಬ್ಯಾಂಕಿನವರು ಕೊಟ್ಟಹಣವ ಎಣಿಸದೇ ನೀತರುತ್ತಿಯಾ!!

ಬಸ್ಸಿಗಂತ ಹೋಗುತೀಯಾ
ಬೋರ್ಡ್ ಓದದೇ ಹತ್ತುತ್ತೀಯಾ
ಅದಲು ಬದಲು ಆದ ಮೇಲೆ ಮುದುರಿಕೊಂಡು ಇಳಿಯುತ್ತಯಾ!!

ಹೆಣ್ಣು ಮಕ್ಕಳು ಓದಕ್ಹೋದ್ರೆ ಬಾಯಿಗೆ ಬಂದಂತೆ ಬೈಯುತ್ತೀಯ
ಪುಸ್ತಕಕಿತ್ಕೊಂಡು ಕೋಣೆಯಲ್ಲಿ ಕೂರ್ಸಿ
ಇಟ್ಟಿನ ಮಡಿಕೆ ಕೆರಿಸ್ತೀಯ!!

ಸಾಲ ನೀನು ಕೇಳೋಕ್ಹೋದ್ರೆ
ಹೊಲ ಮನೆ ಬರೆಸುತ್ತಾರೆ
ಖಾಲಿ ಹಾಳೆಗೆ ಸಹಿ ಹಾಕಿಸ್ಕೊಂಡು
ಬರಿಕೈಯಲ್ಲಿ ಕಳಿಸುತ್ತಾರೆ!!

ದೊಡ್ಡ ದೊಡ್ಡಕವಿಗಳೆಲ್ಲ
ಹುಟ್ಟಿದ ಈನಾಡಿನಲ್ಲಿ
ದಡ್ಡನಾಗಿ ಬೆಳೆದು ನೀನು ಅವರಮಾನ ಕಳೆಯಬೇಡ!!

ಓದು ಬರಹ ಕಲಿಯಬೇಕು
ಬುದ್ಧಿವಂತ ನಾಗಬೇಕು
ಬುದ್ಧಿವಂತ ನಾಗಿ ನೀನು ಊರಿಗೆ
ಹೆಸರಾಗಬೇಕು!!

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





**ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.**


**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)**
**ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ ಸಂಖ್ಯೆ : 0836–2441129**
**ಇ–ಮೇಲ್ : sislepdirector.dwd@gmail.com**